ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 10 | ಸಂಚಿಕೆ 7–8 | ಫೆಬ್ರವರಿ 21, 1988 | ಬೆಲೆ 1 ರೂ.

ಒಳಗಿನ ಪುಟಗಳಲ್ಲಿ

ಮಾರ್ಚ್ 15 ರಂದು ಭಾರತ ಬಂದ್ ಯಶಸ್ವಿಗೊಳಿಸಿರಿ.

ಸಿ.ಪಿ.ಐ.(ಎಂ), ಸಿ.ಪಿ.ಐ, ಜನತಾ ಪಕ್ಷಗಳ ಜಂಟಿ ಕರೆ

ಎಡ ಮತ್ತು ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯಾತೀತ ಪಕ್ಷಗಳು "ರಾಜೀವ್ ಗಾಂಧಿ ರಾಜೀನಾಮೆ ಮತ್ತು ಮರು ಚುನಾವಣೆ" ಒತ್ತಾಯಿಸಿ ಭಾರತ್ ಬಂದ್ ನಡೆಸಲು ನಿರ್ಧಾರ ಕೈಗೊಂಡಿವೆ. ಇದೇ 21.1.1988ರಂದು ನವದೆಹಲಿಯಲ್ಲಿ ಎಡ, ಪ್ರಜಾಪ್ರಭುತ್ವವಾದಿ, ಜಾತ್ಯಾತೀತ ಪಕ್ಷಗಳ ಕೇಂದ್ರ ನಾಯಕತ್ವಗಳ ಜಂಟಿ ಸಭೆಯೊಂದು ಕ್ರಾಂತಿಕಾರಿ ಸಮಾಜವಾದಿ ಪಕ್ಷ (ಆರ್.ಎಸ್.ಪಿ.) ದ ಹಿರಿಯ ನಾಯಕ ಶ್ರೀ ತ್ರಿದಿಬ್ ಚೌಧರಿಯವರ ಅಧ್ಯಕ್ಷತೆಯಲ್ಲಿ ನಡೆದು ಮೇಲಿನ ತೀರ್ಮಾನವನ್ನು ಕೈಗೊಳ್ಳಲಾಗಿದೆ. ಈ ಸಭೆಯಲ್ಲಿ ಜನ ಮೋರ್ಚಾದ ಮುಂದಾಳುಗಳಾದ ವಿ.ಪಿ. ಸಿಂಗ್, ರಾಮಧನ್, ಅರುಣ್ ನೆಹ್ರು, ಆರಿಫ್ ಮೊಹಮ್ಮದ್ ಖಾನ್ ಮತ್ತು ವಿ.ಸಿ. ಶುಕ್ಲ, ಜನತಾ ಪಕ್ಷದ ಚಂದ್ರಶೇಖರ್, ಮಧುದಂಡವತೆ, ಅನಂತರಾಮ್ ಜೈಸ್ವಾಲ್, ಲೋಕದಳ (ಎ) ದ ಅಜಿತ್ ಸಿಂಗ್ ಕಾಂಗ್ರೆಸ್ (ಎಸ್) ನ ಕೆ.ಪಿ. ಉನ್ನಿಕೃಷ್ಣನ್ ತೆಲುಗು ದೇಶಂ ಪಕ್ಷದ ಸಿ. ಮಾಧವ ರೆಡ್ಡಿ, ಫಾರ್ವರ್ಡ್ ಬ್ಲಾಕ್‌ನ ಚಿತ್ತಬಸು ಮತ್ತು ಡಿ ಡಿ.ಶಾಸ್ತ್ರಿ,ಆರ್.ಎಸ್.ಪಿ.ಯ ತ್ರಿದಿಬ್ ಚೌಧರಿ ಮತ್ತು ಸುಶೀಲ್ ಭಟ್ಟಾಚಾರ್ಯ, ಭಾರತ ಕಮ್ಯೂನಿಸ್ಟ್ ಪಕ್ಷದ ಇಂದ್ರಜಿತ್ ಗುಪ್ತ, ಎ.ಬಿ.ಬರ್ಧನ್ ಮತ್ತು ಹೋಮಿದಾಜಿ, ಸಿ.ಪಿ.ಐ. (ಎಂ)ನ ಹರಿಕಿಶನ್ ಸಿಂಗ್ ಸುರ್ಜಿತ್ ಮತ್ತು ಸಮರ್‌ಮುಖರ್ಜಿಭಾಗವಹಿಸಿದ್ದರು ಈ ಸಭೆಯು ಭಾರತ್ ಬಂದ್ ಆಚರಣೆಯ ದಿನ 1988 ಮಾರ್ಚ್ 15 ಎಂದು ನಿರ್ಣಯಿಸಿ, ಅದಕ್ಕೆ ಸಂಬಂಧಿಸಿ ಒಂದು ಮನವಿಯನ್ನು ಅಂಗೀಕಾರ ಮಾಡಿದೆ. ಆ ಮನವಿಯ ಪೂರ್ಣ ಪಾಠವನ್ನು ಕೆಳಗಡೆ ಕೊಡಲಾಗಿದೆ.

"ದೇಶದ ಆರ್ಥಿಕ ಪರಿಸ್ಥಿತಿಯು ಹದಗೆಡುತ್ತಾ, ನಿರುದ್ಯೋಗ, ಬಡತನ ಮತ್ತು ಹಸಿವು ಹೆಚ್ಚಾಗುತ್ತಿರುವುದರ ಬಗ್ಗೆ ಎಡ, ಪ್ರಜಾಪ್ರಭುತ್ವವಾದಿ, ಜಾತಿ-ಮತಾತೀತ ಪಕ್ಷಗಳ ಈ ಸಭೆಯು ತೀವ್ರ ಕಳವಳವನ್ನು ವ್ಯಕ್ತಪಡಿಸುತ್ತದೆ. ಸಾವಿರಗಟ್ಟಲೆ ಕಾರ್ಖಾನೆಗಳು ಮುಚ್ಚಿರುವುದರಿಂದಲೂ ರೈತರಿಗೆ ಪ್ರತಿಫಲದಾಯಕ ಬೆಲೆಗಳು ನಿರಾಕರಿಸಲ್ಪಡುವುದರಿಂದಲೂ ಅತೀವ ಸಂಕಷ್ಟಗಳಿಗೆ ಕಾರಣವಾಗುತ್ತಿದೆ. ಎಡೆ ಬಿಡದೆ ಬೆಲೆ ಏರಿಕೆ ಆಗುತ್ತಿರುವುದು ಜನರ ಕಷ್ಟನಷ್ಟಗಳನ್ನು ಹೆಚ್ಚಿಸುತ್ತಿದೆ. ದುರ್ಬಲ ವಿಭಾಗಗಳ ಮತ್ತು ಮಹಿಳೆಯರ ಮೇಲೆ ನಡೆಯುವ ಅತ್ಯಾಚಾರಗಳಿಗೆ ಕೊನೆಯಿಲ್ಲವಾಗಿದೆ. ಪ್ರಜಾಪ್ರಭುತ್ವವಾದಿ ಹಕ್ಕುಗಳು ಮತ್ತು ಟ್ರೇಡ್ ಯೂನಿಯನ್ ಹಕ್ಕುಗಳು ಮೊಟಕು ಗೊಳಿಸಲ್ಪಡುತ್ತವೆ.

"ಜನರಿಂದ ಚುನಾಯಿತವಾಗಿರುವ ರಾಜ್ಯ ಸರ್ಕಾರಗಳು ರಾಷ್ಟ್ರ ವಿರೋಧಿಯೆಂದು ತನಗನಿಸ್ಸಿದರೆ ಅವುಗಳನ್ನು ಕಿತ್ತೊಗೆಯುವುದಾಗಿ ಹೇಳುವ ಅಹಂಭಾವವನ್ನು ಪ್ರಧಾನಿ ಪ್ರದರ್ಶಿಸಿದ್ದಾರೆ. ಇದು ಸಾಂಸದಿಕ ಪ್ರಜಾಪ್ರಭುತ್ವಕ್ಕೇನೇ ಗಂಭೀರವಾದ ಅಪಾಯವನ್ನು ತಂದಿಡುವಂಥ ಉದ್ಧಟತನವಾಗಿದೆ. ಉನ್ನತ ಮಟ್ಟಗಳಲ್ಲಿನಭ್ರಷ್ಟಾಚಾರ ಹಾಗೂ ಇದರಿಂದ ಉದ್ಭವಿಸಿದ ಲೋಕಾಪವಾದಗಳು ಇತ್ತೀಚೆಗೆ ಇಡೀ

(8 ನೇ ಪುಟ ನೋಡಿ)

ಸೂಚನೆ

ಮುದ್ರಣಾಲಯದ ತೊಂದರೆಯಿಂದಾಗಿ ಫೆ.14ರ ಸಂಚಿಕೆ ಪ್ರಕಟವಾಗಲಿಲ್ಲ. ಓದುಗರಿಗಾದ ತೊಂದರೆಗೆ ವಿಷಾದಿಸುತ್ತೇವೆ. ಬಾಕಿ ಉಳಿಸಿಕೊಂಡಿರುವ ಎಜೆನ್ಸಿದಾರರು ಕೂಡಲೇ ಹಣ ಪಾವತಿ ಮಾಡಬೇಕೆಂದು ವಿನಂತಿಸುತ್ತೇವೆ. ವಿಶೇಷಾಂಕ ಸಂಚಿಕೆ ಬೆಲೆ ರೂ 2-50

ವ್ಯವಸ್ಥಾಪಕರು

ರಾಜ್ಯದಲ್ಲಿ ಅಖಿಲ ಭಾರತ ಕಿಸಾನ್ ಕೌನ್ಸಿಲ್ ಸಭೆ

ಏಪ್ರಿಲ್ 3, ಲಕ್ಷ ರೈತರ ವಿಧಾನಸೌಧ ಚಲೋ

ಕರ್ನಾಟಕ ರಾಜಧಾನಿ ಬೆಂಗಳೂರಿನಲ್ಲಿ ಏಪ್ರಿಲ್ 3ರಿಂದ 5ರವರೆಗೆ ನಡೆಯಲಿರುವ ಅಖಿಲ ಭಾರತ ಕಿಸಾನ್ ಕೌನ್ಸಿಲ್ ಸಭೆಗೆ ಪೂರ್ವ ಭಾವಿಯಾಗಿ ಏಪ್ರಿಲ್ 3ರಂದು ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ 1 ಲಕ್ಷ ರೈತರ ಬೃಹತ್ ವಿಧಾನ ಸೌಧ ಚಲೋ ಕಾರ್ಯಕ್ರಮ ನಡೆಯಲಿದೆ. ಬೆಂಗಳೂರಿನಲ್ಲಿ 15, 16, ರಂದು ಸೇರಿದ ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಯಿತು.

ರಾಜ್ಯದ ರೈತ ಸಮುದಾಯ ಪ್ರಾಕೃತಿಕ ವಿಕೋಪದಿಂದ ಎದುರಿಸುತ್ತಿರುವ ಸಮಸ್ಯೆಗಳಿಗೆ ಒಂದೆಡೆ ಪರಿಹಾರ ಬೇಕಾಗಿದ್ದಲ್ಲಿ ಇನ್ನೊಂದೆಡೆ ರಾಜ್ಯ ಸರಕಾರ ರೈತರ ಪ್ರಶ್ನೆಗಳನ್ನು ಇತ್ಯರ್ಥಗೊಳಿಸುವಲ್ಲಿ ಉದಾಸೀನ ಭಾವನೆ ತಾಳಿದೆ. ಕರ್ನಾಟಕ ಪ್ರಾಂತ ರೈತ ಸಂಘ ರೈತ ಸಮುದಾಯದ ಪರವಾಗಿ ರಾಜ್ಯ ಸರ್ಕಾರಕ್ಕೆ ಸಲ್ಲಿಸಿದ ಮನವಿ, ನಡೆಸಿದ ಚರ್ಚೆಗಳಿಗೆ ಪೂರಕ ಪ್ರತಿಕ್ರಿಯೆ ನೀಡುವಲ್ಲಿ ರಾಜ್ಯ ಸರಕಾರ ವಿಫಲವಾಗಿದೆ. ಕೇಂದ್ರ ಸರ್ಕಾರದ ಭೂಮಾಲಿಕ ಪರನೀತಿಯಿಂದಾಗಿ ಸಾಮಾನ್ಯ ರೈತರ ಬದುಕು, ಅಸಾಧ್ಯವಾಗುತ್ತಿದ್ದರೆ ರಾಜ್ಯ ಸರ್ಕಾರದ ನೀತಿಯೂ ಇದಕ್ಕೆ ಭಿನ್ನವಾಗಿಲ್ಲ.

ದೇಶದಲ್ಲಿ ಬೆಳೆದು ಬರುತ್ತಿರುವ ರಾಜಕೀಯ ಪರಿಸ್ಥಿತಿಯ ಹಿನ್ನೆಲೆಯಲ್ಲಿ ರೈತ ಸಮುದಾಯ ಕಾರ್ಮಿಕ ವರ್ಗದ ನೇತೃತ್ವದಲ್ಲಿ ನಿರ್ಣಯಾತ್ಮಕ ಪಾತ್ರ ವಹಿಸಬೇಕಾಗಿದ್ದು–ರಾಜ್ಯದ ರೈತ ಸಮುದಾಯ ಹೋರಾಟದ ಕಣಕ್ಕೆ ಧುಮುಕಲು ಕರ್ನಾಟಕ ಪ್ರಾಂತ ರೈತ ಸಂಘ ಕರೆ ನೀಡಿದ್ದು ಏಪ್ರಿಲ್ 3ರ ರೈತ ಪ್ರದರ್ಶನ ಚಾರಿತ್ರಿಕವಾಗಲಿದೆ. ರಾಜ್ಯದ ಎಲ್ಲೆಡೆಯಲ್ಲೂ ಈ ಮಹ ಪ್ರದರ್ಶನವನ್ನು ಯಶಸ್ವಿಗೊಳಿಸಲು ಈಗಿನಿಂದಲೇ ಕಾರ್ಯಕ್ರಮ ರೂಪಿಸಲು ಘಟಕಗಳಿಗೆ ಕರೆ ಕೊಡಲಾಗಿದೆ.

ಮಲ ತಿನ್ನಿಸಿದ ಪ್ರಕರಣ ತಪ್ಪಿತಸ್ಥರ ಶಿಕ್ಷೆಗೆ ಒತ್ತಾಯ

ಫೆಬ್ರವರಿ 15, 16 ರಂದು ಬೆಂಗಳೂರಿನಲ್ಲಿ ಸಭೆ ಸೇರಿದ್ದ ಕರ್ನಾಟಕ ಪ್ರಾಂತ ರೈತಸಂಘದ ಸಭೆಯು ಇತ್ತೀಚಿಗೆ ಬೆಂಡಿಗೇರಿ ಮತ್ತು ತತ್ತೂರುಗಳಲ್ಲಿ ದಲಿತರಿಗೆ ಮಲ ತಿನ್ನಿಸಿದ ಅಮಾನವೀಯ ಕೃತ್ಯವನ್ನು ತೀವ್ರವಾಗಿ ಖಂಡಿಸಲಾಯಿತು ಈ ಪ್ರಕರಣದಲ್ಲಿ ಕೃತ್ಯವೆಸಗಿದ ತಪ್ಪಿತಸ್ತರಿಗೆ ಉಗ್ರ ಶಿಕ್ಷೆ ನೀಡಲು ರಾಜ್ಯ ಸಮಿತಿಯು ಸರಕಾರವನ್ನು ಒತ್ತಾಯಿಸಿದೆ.

ಬಿಜಾಪುರ ರೈತರ ಮೇಲೆ ಲಾಠಿ ಖಂಡನೆ

ಇತ್ತೀಚಿಗೆ ಬಿಜಾಪುರದ ರೈತರು ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಹಲವಾರು ರೈತರ ಪ್ರಶ್ನೆಗಳನ್ನು ಮುಂದಿರಿಸಿ ಹೋರಾಟ ನಡೆಸಿದ ಸಂದರ್ಭದಲ್ಲಿ ಇವರ ಮೇಲೆ

(8ನೇ ಪುಟ ನೋಡಿ)

ಈ ಹೇಯ ಮಸೂದೆ ವಾಪಸಾಗಲಿ

ವಿಧಾನ ಮಂಡಲದ ಸದನಗಳಲ್ಲಿ ಶಾಸಕರು ಸದನಗಳನ್ನು ವಂಚಿಸುವ ಉದ್ದೇಶದಿಂದ ಸುಳ್ಳು ಹೇಳಿಕೆ ನೀಡಿದರೆ ಅಥವಾ ಸುಳ್ಳೆಂದು ಅರಿತ್ತಿದ್ದರೂ ಅಂತಹ ದಾಖಲೆಗಳನ್ನು ನೀಡುವ ಸದನದ ಒಳಗೆ ಅದರ ಕಾರ್ಯಕಲಾಪಗಳಿಗೆ ಅಡ್ಡಿಯಾಗುವ ರೀತಿಯಲ್ಲಿ ಗಲಭೆ, ಗೊಂದಲಗಳನ್ನು ಮಾಡಿದರೆ ಅಂಥ ಶಾಸಕರಿಗೆ ಕಠಿಣ ಸಜೆ, ಅಥವಾ ದಂಡ ವಿಧಿಸುವ ವಿಧೇಯಕವನ್ನು ವಿಧಾನ ಸಭೆಯಲ್ಲಿ ಮಂಡಿಸಲಾಗಿದೆ. ಇನ್ನೊಬ್ಬ ಶಾಸಕನ ವಿರುದ್ಧ ಯಾವುದೇ ನಿಂದನಾತ್ಮಕ ಆಪಾದನೆ ಅಥವಾ ದ್ವೇಷ ಪೂರ್ವಕವಾದ ಸುಳ್ಳು ಹೇಳಿದರೆ ಅಥವಾ ಟೀಕೆ ಮಾಡಿದರೂ ಅಂಥವರಿಗೆ ಶಿಕ್ಷೆ ವಿಧಿಸಲಾಗುವುದಂತೆ.

ಜನತಾ ಸರ್ಕಾರ ಇಂಥ ಅತ್ಯಂತ ಹೇಯವಾದ ಮಸೂದೆಯನ್ನು ಮಂಡಿಸಿ ಅತ್ಯಂತ ಕ್ರೂರ ಸರ್ವಾಧಿಕಾರಿ ಕೂಡ ತಲೆ ತಗ್ಗಿಸುವಂತೆ ಮಾಡಿದೆ. ತುರ್ತು ಪರಿಸ್ಥಿತಿಯ ಕಹಿನೆನಪುಗಳನ್ನು ಕಣ್ಣಮುಂದಿರಿಸುತ್ತಿದೆ.

ಚುನಾಯಿತ ಸದಸ್ಯರಿಗೆ ನೀತಿ ಸಂಹಿತೆ ಅತ್ಯಗತ್ಯ. ಆದರೆ ಅವರ ಬಾಯನ್ನೇ ಮುಚ್ಚುವ, ಯಾವ ರೀತಿ ಮಾತಾಡಬೇಕು, ಅಭಿಪ್ರಾಯ ವ್ಯಕ್ತ ಮಾಡಬೇಕೆಂದು ಆದೇಶ ನೀಡುವ, ಮಸೂದೆ ಮೂಲಕ ಸದನವೇ 5ವರ್ಷ ಶಿಕ್ಷೆ ವಿಧಿಸಬಹುದು. 50 ಸಾವಿರ ರೂಪಾಯಿ ದಂಡವಿಧಿಸಬಹುದೆಂದು ಹೇಳುವ ಜನತಾ ಸರ್ಕಾರದನಿಲುವು ನಿಜವಾಗಿಯೂ ಖಂಡನೀಯ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಈ ಮಸೂದೆಯನ್ನು ಬಲವಾಗಿ ಖಂಡಿಸುತ್ತದೆ. ಅದನ್ನು ಕೂಡಲೇ ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸುತ್ತದೆ.

ಆಡಳಿತಾತ್ಮಕವಾಗಿ ಜನತಾ ಪಕ್ಷ ಯಾವ ನೀತಿಯನನ್ನು ಸರಿಸುತ್ತಿದೆ, ಪಕ್ಷಕ್ಕೂ ಆಡಳಿತೆಗೂ ಎಂಥ ಸಂಬಂಧವಿದೆಂಬ ಅಂಶ ಪಕ್ಷಕ್ಕೂ ಮತ್ತು ಪಕ್ಷದ ಆಡಳಿತೆ ಎಷ್ಟು ದೂರದಲ್ಲಿದೆ ಎಂಬ ಅಂಶವನ್ನು ಮಾಜಿ ಸಚಿವ, ಜನತಾ ಪಕ್ಷದ ಶಾಸಕರಾದ ವೈಜನಾಥ ಪಾಟೀಲರು ಬಹಿರಂಗಗೊಳಿಸಿದ್ದಾರೆ. "ಶಾಸಕರಿಗೆ ಶಿಕ್ಷೆ ವಿಧಿಸಲು ಅವಕಾಶ ಕಲ್ಪಿಸುವಂಥ ವಿವಾದಾತ್ಮಕ ಮಸೂದೆಯನ್ನು ಶಾಸಕಾಂಗ ಪಕ್ಷದ ಸಭೆಯಲ್ಲಿ ಚರ್ಚೆಗೆ ತಾರದೆ, ವಿಧಾನ ಸಭೆಯಲ್ಲಿ ನೇರ ಮಂಡಿಸುವುದೆಂದರೆ ಬಹುಶಃ ಜನತಾ ಶಾಸಕರೆಲ್ಲ ಕುರಿಗಳೆಂದು ತಿಳಿಯಲಾಗುತ್ತಿದೆಯೇ" ? ಎಂಬ ನೇರ ಪ್ರಶ್ನೆಯನ್ನೆಸೆದಿದ್ದಾರೆ. ಜಗತ್ತಿನ ಯಾವ ಪ್ರಜಾಪ್ರಭುತ್ವ ರಾಷ್ಟ್ರದಲ್ಲೂ ಇಂಥ ಕಪ್ಪು ಕಾನೂನು ಇರಲಿಕ್ಕಿಲ್ಲೆಂದೂ ಹೇಳಿ ಇದನ್ನು ಹಿಂತೆಗೆದುಕೊಳ್ಳದಿದ್ದರೆ ಸದನದ ಸದಸ್ಯತ್ವ ಕಳೆದುಕೊಳ್ಳುವ

(8 ನೇ ಪುಟ ನೋಡಿ)

ವಿಧಾನ ಮಂಡಲ ಕಾರ್ಯ ಕಲಾಪ-ಎರಡು ದಿಕ್ಕಿನಲ್ಲಿ ತಪ್ಪುಗಳು

ವಿಧಾನ ಸಭೆಯಲ್ಲಿ ರಾಜ್ಯಪಾಲರ ಭಾಷಣದ ಕೆಲವು ಅಂಶಗಳ ಬಗ್ಗೆ ಎನ್ಕೆ ವಿಮರ್ಶಿಸಿದ್ದಾರೆ

ಎನ್. ಕೆ. ಉಪಾಧ್ಯಾಯ

ರಾಜ್ಯಪಾಲರ ಭಾಷಣದೊಂದಿಗೆ ಪ್ರಾರಂಭವಾದ ಹತ್ತು ದಿನಗಳ ವಿಧಾನ ಸಭೆ, ವಿಧಾನ ಪರಿಷತ್ತಿನ ಸಭೆಗಳು ಜನರೆದುರಿಸುತ್ತಿರುವ ಹಲವಾರು ಸಮಸ್ಯೆಗಳಿಗೆ ಯಾವೊಂದು ಪರಿಹಾರದ ಕುರಿತು ಗಂಭೀರವಾಗಿ ಚರ್ಚಿಸದೆ ಪರಿಹಾರ ತೋರಿಸದ 'ಹರಿದೇರಿ ನಾಗೇರಿ, ಹಾಡಿನಲ್ಲಿ, ಸಮಯ ಕಳೆದು ಮುಕ್ತಾಯವಾಗಿವೆ. ಈ ಅವಧಿಯಲ್ಲಿ ಶಾಸಕರ–ಮಂತ್ರಿಗಳದಿನ ಭತ್ತೆ ಪ್ರವಾಸ ಭತ್ಯೆಗಳಿಗಾಗಿ ಲಕ್ಷಾವಧಿ ರೂಪಾಯಿ ವಿನಾ ಕಾರಣ ಖರ್ಚಾಗಿವೆ.

ಪ್ರತಿ ವರ್ಷದ ಪ್ರಾರಂಭದಲ್ಲಿ ಎರಡೂ ಸದನಗಳ ಜಂಟೀ ಸಮಾವೇಶದಲ್ಲಿ ರಾಜ್ಯಪಾಲರ ಭಾಷಣ ಎರಡೂ ಸದನಗಳಲ್ಲಿ ಅನಂತರ ರಾಜ್ಯಪಾಲರ ಭಾಷಣಕ್ಕೆ ಅಭಿನಂದನಾ ನಿರ್ಣಯ ಅದರ ಮೇಲೆ ಚರ್ಚೆ. ಇದು ಚಾಲ್ತಿಯಲ್ಲಿರುವ ರೂಢಿ. ರಾಜ್ಯಪಾಲರು ತಮ್ಮ ಭಾಷಣದಲ್ಲಿ ಸರ್ಕಾರದ ಹಿಂದಿನ ವರ್ಷದ ಸಾಧನೆ ಮುಂದಿನ ವರ್ಷದ ಸಾಧನೆಗಳನ್ನು ವಿವರಿಸುವ ಪರಿಪಾಠ. ಅದರ ಮೇಲೆ ಚರ್ಚೆ, ಸರ್ಕಾರದ ಉತ್ತರ, ಅನಂತರ ಸದನಗಳ ಮುಂದೂಡಿಕೆ. ಬಜೆಟ್ ಅಧಿವೇಶನಕ್ಕೆ ಪೂರ್ವಭಾವಿಯಾಗಿ ಈ ಕಸರತ್ತು. ವಿವರವಾದ ಚರ್ಚೆ ಬಜೆಟ್ ಅಧಿವೇಶನದಲ್ಲಿ ನಡೆಯುತ್ತದೆ. ಆದ್ದರಿಂದ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಗೆ ಇತಿಮಿತಿ, ಆದರೆ ಅವಕಾಶ ಸಿಕ್ಕಾಗೆಲ್ಲಾ ವಿರೋಧ ಪಕ್ಷಗಳು ಸರ್ಕಾರದ ತಪ್ಪು ತಡೆಗಳನ್ನು ಬಯಲಿಗೆಳೆಯಲಿಕ್ಕೆ ಪ್ರಯತ್ನಿಸುವುದು ಸಹಜ. ಆದರೆ ಅದು ಮಿತಿ ಮೀರಿದಾಗ, ರಾಜಕೀಯವನ್ನೇ ಮೂಲೋದ್ದೇಶವನ್ನಾಗಿಟ್ಟುಕೊಂಡಾಗ, ಸಹನೆ ಕೈ ಮೀರಿದಾಗ, ಸದನಗಳು ವಿಚಾರಶೀಲ ಚರ್ಚೆಯ ಅವಕಾಶವನ್ನೇ ಕಳೆದುಕೊಂಡು ಆರೋಪ ಪ್ರತ್ಯಾರೋಪಗಳ, ಬೈಗಳ, ಹೊಡೆದಾಟಗಳಲ್ಲಿ ಮುಳುಗಿದ್ದು, ಸಾಧಿಸಬೇಕಾದ್ದನ್ನು ಸಾಧಿಸುವುದಲ್ಲಿ ವಿಫಲಗೊಳ್ಳುತ್ತವೆ. ಆ ದೃಷ್ಟಿಯಿಂದ ಹತ್ತು ದಿನಗಳ ವಿಧಾನ ಸಭೆ, ವಿಧಾನ ಪರಿಷತ್ತಿನ ಸಭೆಗಳು ವಿಫಲಗೊಂಡಿವೆಂದರೆ ತಪ್ಪಾಗಲಾರದು. ಅದಕ್ಕೆ ಕಾಂಗ್ರೆಸ್ ಮುಖ್ಯ ಕಾರಣ. ಅದರಲ್ಲಿ ಜನತಾ ಪಕ್ಷದ ನಿಲುವೆಯ ಪಾಲು ಇಲ್ಲದಿಲ್ಲ.

ರಾಜ್ಯಪಾಲರ ಭಾಷಣ ಹಲವಾರು ತಪ್ಪುಗಳಿಂದ, ಒಂದು ವರ್ಷದಲ್ಲಿ ಸಾಧಿಸಲಾರದಂಥ ಆಶ್ವಾಸನೆಗಳಿಂದ ತುಂಬಿದೆ. ರೈತರು ಪಡೆದ ಕೃಷಿ ಸಾಲವನ್ನು ಜೂನ್ 30 ರೊಳಗೆ ತೀರಿಸಿದರೆ ಅದರ ಮೇಲೆ ಬಡ್ಡಿ ರಿಯಾಯಿತಿ ನೀಡಲಾಗುವುದೆಂದೂ, ಇದೇ ವರ್ಷ ಮಾರ್ಚ್‌ಕೊನೆಯೊಳಗಾಗಿ ನಿವೇಶನರಹಿತರಿಗೆ ನಿವೇಶನ ಒದಗಿಸಲಾಗುವುದೆಂಬ ಆಶ್ವಾಸನೆ ರಾಜ್ಯಪಾಲರ ಭಾಷಣದಲ್ಲಿತ್ತು. ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದ ಮೇಲೆ ಭಾಷಣ ಮಾಡುತ್ತಾ, ಬಡ್ಡಿ ರಿಯಾಯಿತಿಗೆ ಕೊನೆ ದಿನ ಮಾರ್ಚ್ 31 ಎಂದೂ ನಿವೇಶನ ಹಂಚಿಕೆಗೆ 1989 ಮಾರ್ಚ್ 31 ಎಂದೂ ಸರಕಾರಿ ತಿದ್ದುಪಡಿ ಮಂಡಿಸಿದ್ದಾರೆ. ಈ ವರ್ಷ ಮಾರ್ಚ್ 31 ರೊಳಗೆ ಸಾಲ ತೀರಿಸಿದ ರೈತರಿಗೆ ಸುಸ್ತಬಡ್ಡಿಯ ಜೊತೆಯಲ್ಲಿಯೇ, ಬಡ್ಡಿ ಮೇಲೆ ಶೇ.5 ಅರ್ಧದಷ್ಟು ರಿಯಾಯಿತಿ ದೊರೆಯಲಿವೆಂದು ಸಾರಿದ್ದಾರೆ. ಈ ರಿಯಾಯಿತಿ ತೃಪ್ತಿಕರವಲ್ಲ, ಕಳೆದು ನಾಲ್ಕು ವರ್ಷಗಳಿಂದಲೂ ರಾಜ್ಯದ ಹೆಚ್ಚಿನ ಪ್ರದೇಶ ಬರಗಾಲವನ್ನೆದುರಿಸುತ್ತಿದೆಂಬಂಶವನ್ನು ಸರಕಾರವೇ ಒಪ್ಪಿಕೊಂಡಿರುವಾಗ ಬಡ ಮತ್ತು ಮಧ್ಯಮ ವರ್ಗದ ರೈತರ ಸಾಲವನ್ನು ಮನ್ನಾ ಮಾಡಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘದ ಬೇಡಿಕೆಯಾಗಿದ್ದಾಗ, ಸರ್ಕಾರದ ನಿರ್ಣಯ ರೈತರ ಪರವಾಗಿಲ್ಲೆಂದೇ ಹೇಳಬೇಕಾಗಿದೆ. ಸಾಲ ಮರುಪಾವತಿಯ ಕಾಲಮಿತಿಯ ಗಡುವನ್ನ ಜೂನ್ 30 ರವರೆಗೆ ಮುಂದುವರಿಸಬೇಕಾಗಿತ್ತು. ಯಾಕೆಂದರೆ, ಸುಗ್ಗಿಯ ದಿನಗಳಲ್ಲಿ ಬೆಲೆ ಕಡಿಮೆಯಾಗಿರುತ್ತದೆ. ರೈತರು ಧಾನ್ಯ ಮಾರಾಟ ಮಾಡಿದರೆ ವ್ಯಾಪಾರಸ್ಥರಿಂದ ವಂಚಿತರಾಗಬೇಕಾಗುತ್ತದೆ. ತಾವು ಬೆಳೆದ ಧಾನ್ಯವನ್ನು ಸಾಲ ಬಡ್ಡಿ ಪಾವತಿಗಾಗಿಅವಸರದಿಂದ ಅಗ್ಗದರದಲ್ಲಿ ಮಾರಾಟಮಾಡಿ ಹಾನಿಗೊಳಗಾಗಬೇಕಾಗುತ್ತದೆ. ಆದ್ದರಿಂದ ಮಾರ್ಚ್ ಕೊನೆಯ ಗಡುವು ಸರಿಯಲ್ಲ. ಅದರ ಜೊತೆಯಲ್ಲಿಯೇ ಬಡ ಮತ್ತು ಮಧ್ಯಮ ವರ್ಗದ ರೈತರನ್ನೂ ಶ್ರೀಮಂತ ರೈತರನ್ನೂ ಒಂದೇ ದೃಷ್ಟಿಯಿಂದ ನೋಡುವುದು ಸರಿಯಲ್ಲ. ಬಡ ಮತ್ತು ಮಧ್ಯಮ ವರ್ಗದ ರೈತರಿಗಷ್ಟೇ ಇಂಥ ರಿಯಾಯಿತಿ ಸಿಗಬೇಕಾಗಿದೆ

ಅಬ್ದುಲ್ ನಜೀರ್ ಸಾಬ್ ಅವರು ವಿಧಾನ ಪರಿಷತ್ತಿನಲ್ಲಿ ಮಾತನಾಡುತ್ತಾ ಸರಕಾರಿ ಅಂಕಿ ಅಂಶಗಳ ಪ್ರಕಾರ ರಾಜ್ಯದಲ್ಲಿ ನಿವೇಶನವಿಲ್ಲದವರು 3 ಲಕ್ಷ ಕುಟುಂಬಗಳಂತೆ. ಒಂದು ವರ್ಷದೊಳಗಾಗಿ ಇವರಿಗೆಲ್ಲಾ ನಿವೇಶನ ನೀಡಲಾಗುವುದೆಂಬ ಆಶ್ವಾಸನೆ, ಅದರ ಜೊತೆಯಲ್ಲಿಯೇ 300 ಜನ ಸಂಖ್ಯೆ ಹಳ್ಳಿಗೆ ಪ್ರಾಥಮಿಕ ಶಾಲೆ ಒದಗಿಸುವ ಆಶ್ವಾಸನೆ, ಕಳೆದ ಹತ್ತಿಪ್ಪತ್ತು ವರ್ಷಗಳಿಂದ ಸರ್ಕಾರಿ ಭೂಮಿಯಲ್ಲಿ ವಾಸಿಸುತ್ತಿರುವವರಿಗೆಲ್ಲಾ ಪಟ್ಟಾ ಕೊಡಲೇಬೇಕೆಂದು ಸಿ.ಪಿ.ಐ.(ಎಂ)ಪ್ರಾಂತರೈತ ಸಂಘಗಳೆಲ್ಲ ಹೋರಾಡುತ್ತಲೇಬಂದಿವೆ. ಅವರಿಗೆಲ್ಲರಿಗೂ ಪಟ್ಟಾ ಕೊಡಲಾಗುವುದೆಂಬ ಆಶ್ವಾಸನೆಗಳನ್ನು ಜನತಾ ಸರಕಾರ ಕೊಡುತ್ತ ಬಂದಿದೆ. ಅದರದು ಕಾರ್ಯರೂಪದಲ್ಲಿ ಬಂದಿಲ್ಲ. ಆಗಿರುವಾಗ ರಾಜ್ಯದಲ್ಲಿಯ ನಿವೇಶನರಹಿತರಿಗೆಲ್ಲಾ ಮನೆಒದಗಿಸುತ್ತೇವೆಂಬ ಜಂಭದ ಮಾತನ್ನು ನಂಬುವುದಾದರೂ ಹೇಗೆ ?

ರಾಮಕೃಷ್ಣ ಹೆಗಡೆಯವರು ವಿಧಾನ ಸಭೆಯಲ್ಲೂ, ಅಬ್ದುಲ್ ನಜೀರ್ ಸಾಬ್ ಅವರು ವಿಧಾನ ಪರಿಷತ್ತಿನಲ್ಲೂ, ರಾಜ್ಯ ಸರ್ಕಾರ ಆರ್ಥಿಕ ಮುಗ್ಗಟ್ಟು ಎದುರಿಸುತ್ತಿರುವ ಬಗ್ಗೆ ಚಿಂತನೆ ವ್ಯಕ್ತಮಾಡಿ, ಇದಕ್ಕೆಲ್ಲಾ ನಾಲ್ಕು ವರ್ಷಗಳ ಬರಗಾಲವೇ ಮುಖ್ಯ ಕಾರಣವೆಂದೂ, ಹಾಗೆಯೇ ಕೇಂದ್ರ ಸರ್ಕಾರದ ಧನ ಸಹಾಯ ಅಪೇಕ್ಷಿಸಿದಷ್ಟು ಒದಗದಿರುವುದರಿಂದ ಖಜಾನೆ ಖಾಲಿಯಾಗಿ ಭೀಕರ ಪರಿಸ್ಥಿತಿ ಎದುರಿಸಬೇಕಾಗಿದೆಂದೂ ಸಂಕಷ್ಟ ತೋಡಿಕೊಂಡರು. ಇವರ ವಿವರಣೆ ತೃಪ್ತಿಕರವಾಗಿಲ್ಲ. ರಾಜ್ಯಕ್ಕೆ ಬರಗಾಲ ಹೊಸವೇನಲ್ಲ. ಒಂದಿಲ್ಲೊಂದು ಭಾಗ ಭೀಕರ ಬರಗಾಲದ ಬವಣೆಗೆ ತುತ್ತಾಗುತ್ತಿರುವುದನ್ನು ಶತಮಾನಗಳಿಂದಲೂ ಕಂಡಿದ್ದೇವೆ. ಆದ್ದರಿಂದ ತಮ್ಮ ಆಳ್ವಿಕೆಯ ನಾಲ್ಕು ವರ್ಷಗಳ ಬರಗಾಲವನ್ನು ಗುಡ್ಡವನ್ನಾಗಿ ತೋರಿಸುವುದರಲ್ಲಿ ಅರ್ಥವಿಲ್ಲ. ಬರಗಾಲ ನಿವಾರಣೆಗಾಗಿ ರಾಜ್ಯ ಸರಕಾರ ಏನಾದರೂ ನಿರ್ದಿಷ್ಟ ರೂಪರೆಶೇಗಳನ್ನು ನಿರ್ಮಿಸಿದೆಯೇ ? ಇಲ್ಲ. ಪ್ರತಿ ವರ್ಷ ಕೋಟ್ಯಾವಧಿ ರೂಪಾಯಿ ರಾಜ್ಯ-ಕೇಂದ್ರದ ಸಹಾಯದಿಂದ ಖರ್ಚಾಗುತ್ತಿದೆ. ತಾತ್ಕಾಲಿಕ ಜನಪ್ರಿಯತೆ ಗಳಿಸಲು, ಒತ್ತಡಗಳಿಗೆ ಮಣಿದು ದುಷ್ಕಾಳ ಕಾಮಗಾರಿ ಕೈಗೊಳ್ಳಲಾಗುತ್ತಿದೆ. ರಾಜ್ಯಕ್ಕೆ ನಿರಂತರ ಪ್ರತಿಫಲ ನೀಡುವ, ಸ್ವಲ್ಪ ಮಟ್ಟಿಗಾದರೂ ಬರಗಾಲದ ಬವಣೆಯನ್ನು ತಪ್ಪಿಸುವ ರೀತಿಯಲ್ಲಿ, ಬರಗಾಲ ಪರಿಹಾರ ನಿಧಿಯನ್ನು ಖರ್ಚು ಮಾಡುತ್ತಿಲ್ಲ. ಈ ಅಂಶವನ್ನು ಮಂತ್ರಿಗಳು ತುರ್ತಾಗಿ ಗಮನಿಸಬೇಕು. ಜರೂರಾಗಿ ಕೈಗೊಳ್ಳಬೇಕಾದ ನೀರಾವರಿ ಯೋಜನೆಗಳಿಗೆ ಎಲ್ಲಾ ಸಂಪನ್ಮೂಲ ಬಳಸಿ ಮತಗಳಿಕೆಯ ಜನಪ್ರಿಯ ಯೋಜನೆಗಳನ್ನು ಕೆಲವು ಕಾಲ ಬದಿಗಿರಿಸಿದ್ದರೆ ಬುದ್ಧಿವಂತಿಕೆಯ ವಿಚಾರವೆನ್ನಬಹುದಿತ್ತು. ಕಳೆದ ನಾಲ್ಕು ವರ್ಷಗಳಿಂದಲೂ ನೀರಾವರಿ ಯೋಜನೆಗಳಿಂದಾಗಿ ಬಜೆಟಿನಲ್ಲಿ ಮೀಸಲಾಗಿಟ್ಟ ಹಣವನ್ನು ಒದಗಿಸಲು ಸಾಧ್ಯವಾಗಿಲ್ಲ. ಪ್ರಸ್ತುತ ಸಾಲಿನಲ್ಲಿಯೇ ರೂ. 250 ಕೋಟಿನೀರಾವರಿ ಯೋಜನೆಗಳಿಗೆ ಒದಗಿಸಲಿಕ್ಕಾಗಲಿಲ್ಲ. ಆದ್ದರಿಂದ ರಾಜ್ಯದ ಆರ್ಥಿಕ ನೀತಿ ಪುನರ್ವಿಮರ್ಶಿಸಲ್ಪಡಬೇಕು, ಸರಿಯಾಗಿ ರೂಪಿಸಲ್ಪಡಬೇಕು ಈ ನಿಟ್ಟಿನಲ್ಲಿ ಮಂತ್ರಿಗಳು ಮೌನವಾಗಿದ್ದರು.

ಆದರೆ ವಿಧಾನ ಪರಿಷತ್ತಿನಲ್ಲಿ ಹೆಗಡೆಯವರ ವಿಚಿತ್ರ ಆಶ್ವಾಸನೆ. "ಎಂಟನೇ ಯೋಜನೆಯ ಅವಧಿಯಲ್ಲಿ ಅಪೂರ್ಣ ನೀರಾವರಿ ಯೋಜನೆಗಳ ಕಾರ್ಯ ಪೂರೈಕೆಗಾಗಿ ವರ್ಷಕ್ಕೆ ಒಂದು ಸಾವಿರ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಬೇಕಾಗುತ್ತದೆ. ಮಾಡಿಯೇ ಮಾಡುತ್ತೇವೆ." ಎಂಬ ವಾಗ್ದಾನ ನೀಡಿದ್ದಾರೆ. ಇದು ನಂಬ ತಕ್ಕ ಮಾತೇ ? ಕಾದು ನೋಡೋಣ. ●

ತ್ರಿಪುರಾ ಜನರ ತೀರ್ಪು ತಿರುವು ಮುರುವು : ವಿರೋಧ ಪಕ್ಷಗಳ ಖಂಡನೆ

ತ್ರಿಪುರಾಕ್ಕೆ ಚುನಾವಣೆಗೆ ಎರಡು ದಿನ ಮೊದಲು ಸೈನ್ಯವನ್ನು ಕಳುಹಿಸಿ ಅಲ್ಲಿಯ ಜನರ ತೀರ್ಪನ್ನು ಬಲಾತ್ಕಾರ, ಭ್ರಷ್ಟಾಚಾರಗಳಿಂದ ತಿರುವು ಮುರುವು ಮಾಡಿರುವುದನ್ನು ವಿರೋಧ ಪಕ್ಷಗಳು ಖಂಡಿಸಿವೆ. ತಿರುವನಂತಪುರದಲ್ಲಿ ಪತ್ರಿಕಾ ಗೋಷ್ಠಿಯನ್ನುದ್ದೇಶಿಸಿ ಮಾತನಾಡುತ್ತಿದ್ದ ಲೋಕದಳದ ಕಾರ್ಯದರ್ಶಿ ಸತ್ಯ ಪ್ರಕಾಶ ಮಾಳವೀಯರವರು ತ್ರಿಪುರಾದಲ್ಲಿ ಚುನಾವಣೆಯ ತೀರ್ಪನ್ನು ತಿರುವು ಮುರವು ಮಾಡಲಾಗಿದೆ ಆದ್ದರಿಂದ ಅಲ್ಲಿ ಮತ್ತೆ ತಕ್ಷಣವೇ ಚುನಾವಣೆಯನ್ನು ನಡೆಸಬೇಕು ಎಂದು ಒತ್ತಾಯಿಸಿದ್ದಾರೆ.

ಕೇಂದ್ರ ಗೃಹ ಸಚಿವ ಶಾಖೆಯ ಸಮಾಲೋಚನಾ ಸಮಿತಿಯಲ್ಲಿ ಭಾಗವಹಿಸಿದ್ದ ಎಡ ಪಕ್ಷಗಳು ಚುನಾವಣೆಗೆ ಮುನ್ನ ರಾಜ್ಯ ಸರ್ಕಾರವನ್ನು ಕೇಳದೆಯೇ ಗಲಭೆ ಪೀಡಿತ ಪ್ರದೇಶವೆಂದು ಘೋಷಿಸಿ, ಸೈನ್ಯ ಕಳುಹಿಸಿ ಚುನಾವಣೆಯನ್ನು ತಮ್ಮ ಪರವಾಗಿ ಮಾಡಿಕೊಳ್ಳಲು ಪ್ರಯತ್ನಿಸಿರುವುದನ್ನು ಖಂಡಿಸಿ ಸಭಾತ್ಯಾಗ ಮಾಡಿದವು. ಸಿ.ಪಿ.ಐ.(ಎಂ)ನ ಕಾಂ. ಸಮರ ಮುಖರ್ಜಿ, ಸೋಮನಾಥ ಚಟರ್ಜಿ, ಸಿಪಿಐ ನ ನಾರಾಯಣ ಚೌಬೆ ಹಾಗೂ ಫಾರ್ವರ್ಡ ಬ್ಲಾಕ್ ಸದಸ್ಯರು ಸಭಾತ್ಯಾಗ ಮಾಡಿದರು. ಇವರ ಜೊತೆಯಲ್ಲಿ ಈ ಸಭೆಯಲ್ಲಿ ಭಾಗವಹಿಸಿದ್ದ ಜನತಾದ ಮಧುದಂಡವತೆ ಹಾಗೂ ತೆಲುಗುದೇಶಂ, ಎಜಿಪಿ ಸದಸ್ಯರುಗಳು ಕೂಡಾ ತ್ರಿಪುರಾಕ್ಕೆ ಸೈನ್ಯ ಕಳುಹಿಸಿದ ಜನ ವಿರೋಧಿ ಕ್ರಮವನ್ನು ಖಂಡಿಸಿದರು. ಜೊತೆಗೆ ಕಾಂಗ್ರೆಸ್ (ಎಸ್).ನ ಉನ್ನಿ ಕೃಷ್ಣನ್, ಲೋಕದಳ (ಬಹುಗುಣ) ದ ಸದಸ್ಯರೂ ಕೂಡ ಈ ಚುನಾವಣಾ ಅಕ್ರಮಗಳನ್ನು ಖಂಡಿಸಿದ್ದಾರೆ.

ಮಜ್ಲಿಸ್‌ಪುರದ ಚುನಾವಣೆಯ ಮತ ಎಣಿಕೆಯಲ್ಲಿ ತಪ್ಪಾಗಿದೆ ಎಂದು ಪ್ರಧಾನ ಚುನಾವಣಾಧಿಕಾರಿ ಒಪ್ಪಿಕೊಂಡಿದ್ದಾರೆ. ದೇಶಾದ್ಯಂತ ಆಚರಿಸಿದ ತ್ರಿಪುರಾ ದಿನ ದಂದು ದೆಹಲಿಯಲ್ಲಿ ಎಡ ಪಕ್ಷಗಳ ನಿಯೋಗವೊಂದು ಮೆರವಣಿಗೆಯೊಂದಿಗೆ ತೆರಳಿ ಮನವಿ ಅರ್ಪಿಸಿದಾಗ ಚುನಾವಣಾಧಿಕಾರಿ ತಪ್ಪೊಪ್ಪಿಕೊಂಡಿದ್ದಾರೆಂದು ದೇಶಾಭಿಮಾನಿ" ತಿಳಿಸಿದೆ.

10 ವರ್ಷ ಮುಖ್ಯಮಂತ್ರಿಯಾಗಿದ್ದ ಸರಳ ಜೀವಿ ಕಾಂ. ನೃಪೇನ್ ಚಕ್ರವರ್ತಿ

10 ವರ್ಷಗಳ ದೀರ್ಘಕಾಲ ಮುಖ್ಯ ಮಂತ್ರಿ ಸ್ಥಾನದಲ್ಲಿದ್ದವರು ಇಡೀ ಭಾರತದಲ್ಲಿಯೇ ಎಷ್ಟು ಜನ ಇರಬಹುದು ? ಈಗಿನ ಭಾರತದಲ್ಲಂತೂ ಕೇವಲ ಇಬ್ಬರೇ ಒಬ್ಬರು ಪ.ಬಂಗಾಳದ ಕಾಂ. ಜ್ಯೋತಿ ಬಸು, ಮತ್ತೊಬ್ಬರು ತ್ರಿಪುರಾದ ಕಾಂ. ನೃಪೇನ್.

ಕೇವಲ ಒಂದೆರಡು ವರ್ಷಗಳ ಕಾಲ ಮುಖ್ಯ ಮಂತ್ರಿಯಾಗಿದ್ದವರೂ ಕೂಡ ಅಷ್ಟು ಕೋಟಿ ಸಂಪಾದಿಸಿದರು ಇಷ್ಟು ಮನೆ ಸಿನೆಮಾಥಿಯೇಟರ್ ಇತ್ಯಾದಿ ಮಾಡಿಕೊಂಡರು ಎಂಬುದನ್ನು ದಿನ ನಿತ್ಯ ಕೇಳುತ್ತಿದ್ದೇವೆ. ಇತ್ತೀಚೆಗೆ ನಿಧನರಾದ ಎಂ.ಜಿ ಆರ್.ರವರು ಸಾವಿರ ಕೋಟಿ ರೂ. ಹಣವನ್ನು ಇಟ್ಟಿದ್ದಾರೆಂದೂ ಅದಕ್ಕಾಗಿಯೇ ಎ.ಐ.ಡಿ.ಎಂ.ಕೆ. ಬಣಗಳು ಬಡಿದಾಡುತ್ತಿವೆಯೆಂದು ವರದಿಯಾಗಿದೆ.

ಇದು ಎಲ್ಲಾ ರಾಜ್ಯಗಳಲ್ಲಿ ಕಾಣುವ ಮಾದರಿಯಾದರೆ ಈಗ ಮತ್ತೊಂದು ಮಾದರಿ ನೋಡಿ.

ಕಾಂ. ನೃಪೇನ್ ಚಕ್ರವರ್ತಿಯವರು ತಮ್ಮ 10 ವರ್ಷಗಳ ಮುಖ್ಯ ಮಂತ್ರಿ ನಿವಾಸವನ್ನು ಬಿಟ್ಟು ತೆರಳುವಾಗ ಅವರ ಕೈಯಲ್ಲಿದ್ದುದು ಎರಡು ಸೂಟ್ ಕೇಸ್‌ಗಳು ಕೆಲವು ಪುಸ್ತಕಗಳು.

ಮದುವೆಯೇ ಆಗದ ಈ ಬ್ರಹ್ಮಚಾರಿ ವಾಸಕ್ಕಾಗಿ ಮುಖ್ಯ ಮಂತ್ರಿ ನಿವಾಸದಿಂದ ನೇರ ಹೋದದ್ದೆಲ್ಲಿಗೆ ಗೊತ್ತೆ-ನೇರ ಪಕ್ಷದ ಕಛೇರಿಗೆ. ಅಲ್ಲಿಯ ಒಂದು ಕೊಠಡಿಯಲ್ಲಿಯೇ ಅವರ ಮುಂದಿನ ದಿನಗಳ ವಾಸ. ಮುಖ್ಯ ಮಂತ್ರಿಯಾಗಿದ್ದಾಗಲೂ ಎರಡೇ ಅಂಗಿ ಮತ್ತು ಪಂಚೆ ಅವರ ವಸ್ತ್ರ ಸಂಗ್ರಹದಲ್ಲಿದ್ದುದು. ಈ ಬಟ್ಟೆಗಳನ್ನು ತಾವೇ ದಿನ ನಿತ್ಯ ಒಗೆದುಕೊಳ್ಳುತ್ತಾರೆ ತಾವೇ ಅಡಿಗೆ ಮಾಡಿ ಊಟ ಮಾಡುತ್ತಾರೆ.

ಇವರ ಈ ಸರಳತೆ ಇವರ ಬದ್ಧ ವೈರಿಗಳಿಂದಲೂ ಗೌರವ ಪಡೆದಿದೆ ಎಂದು "ಇಂಡಿಯನ್ ಎಕ್ಸ್ ಪ್ರೆಸ್" ಹಾಗೂ ದಿನ ಸೂಡರ್ ತಿಳಿಸಿದೆ.

ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ ರಾಜ್ಯ ಮಟ್ಟದ ಸಭೆ

ರಾಜ್ಯಾದ್ಯಂತ ಬಲಿಷ್ಠ ಸಂಘಟನೆ ಕಟ್ಟಲು ಕಾ.ಸುಶೀಲಗೋಪಾಲನ್ ಕರೆ

ಮಹಿಳೆಯ ಹಕ್ಕು ಬಾಧ್ಯತೆಗಳನ್ನು ಸುಧಾರಿಸುವ ಹಲವಾರು ಶಾಸನಗಳನ್ನು ತಂದಿದ್ದರೂ ಯಾವೊಂದು ಜಾರಿಗೊಳಿಸದೇ ನಿರುಪಯುಕ್ತವಾಗಿ ಉದ್ಯೋಗಸ್ತ ಹಾಗೂ ಗ್ರಾಮೀಣ ಮಹಿಳೆಯರು ಸಂಕಷ್ಟದ ಬದುಕಿನೊಂದಿಗೆ ಗಂಭೀರ ಹೀನಾಯಸ್ಥಿತಿಗೆ ತಲುಪುವಂತಾಗಿದೆ ಎಂದು ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ ಪ್ರಧಾನ ಕಾರ್ಯದರ್ಶಿಗಳಾದ ಕಾಂ. ಸುಶೀಲಾ ಗೋಪಾಲನ್ ನುಡಿದರು.

ಅವರು ಫೆಬ್ರವರಿ 7ರಂದು ಕರ್ನಾಟಕ ರಾಜ್ಯ ಮಟ್ಟದ ಮಹಿಳೆಯರ ಸಭೆಯನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. 1987ರಲ್ಲಿ ಮದ್ರಾಸ್‌ನಲ್ಲಿ ಸ್ಥಾಪನೆಗೊಂಡ ಸಂಘಟನೆ ದೇಶದ 18 ರಾಜ್ಯಗಳಲ್ಲಿ ಚಟುವಟಿಕೆಯನ್ನು ವಿಸ್ತರಿಸಿ 20ಲಕ್ಷಕ್ಕೂ ಹೆಚ್ಚು ಸದಸ್ಯರನ್ನು ಒಳಗೊಂಡ ಅತ್ಯಂತ ಬಲಿಷ್ಠ ಸಂಘಟನೆಯಾಗಿ ಹೊರ ಹೊಮ್ಮಿದೆ ಎಂದು ಹೇಳಿದರು. ಬಹುಪತ್ನಿತ್ವ ಹೊಂದುವ, ಮಹಿಳೆಗೆ ಆಸ್ತಿ ಹಕ್ಕು ನಿರಾಕರಿಸುವಂತಹ ಸಿಖ್ ಧರ್ಮದ ಕಾನೂನು, 'ಸತಿ ಪ್ರಕರಣ' ಮುಸ್ಲಿಂ ಪಂಥ ರಕ್ಷಣಾ ಕಾನೂನುಗಳಿಗೆ ಬೆಂಬಲಿಸುವ ಮೂಲಕ ಕಾಂಗ್ರೆಸ್ ಸರ್ಕಾರ ಧರ್ಮಾಂಧ ಮೂಲಭೂತವಾದಿಗಳೊಂದಿಗೆ ಕೈಜೋಡಿಸಿ ದೇಶದ ಐಕ್ಯತೆ-ಸಮಗ್ರತೆಗೆ ಗಂಡಾಂತರಕಾರಿ ಪರಿಸ್ಥಿತಿ ತಂದೊಡ್ಡಿದೆ ಎಂದು ಆರೋಪಿಸಿದರು. ದೇಶದಲ್ಲಿರುವ 14% ದುಡಿಯುವ ಮಹಿಳೆಯರಿಗೆ ರಾಷ್ಟ್ರೀಯ ಕನಿಷ್ಟ ವೇತನ ಜಾರಿಗೊಳಿಸುವಲ್ಲಿ ವಿಫಲ ಗೊಂಡಿರುವ ಸರ್ಕಾರ ಆಧುನಿಕರಣ, ಕಂಪ್ಯೂಟರೀಕರಣದ ಮೂಲಕ ಉದ್ಯೋಗಸ್ತರನ್ನು ನಿರುದ್ಯೋಗಿಗಳನ್ನಾಗಿ ಪರಿವರ್ತಿಸಲಾಗುತ್ತಿದೆ ಎಂದು ಟೀಕಿಸಿದರು. ಸಮಾನ ದುಡಿಮೆಗೆ ಸಮಾನ ವೇತನ ಎಲ್ಲಾ ಕ್ಷೇತ್ರಗಳಲ್ಲಿ ಸಮಾನ ಸ್ಥಾನಮಾನ ದೊರಕಿಸಿಕೊಳ್ಳಲು ಸಂಘಟಿತರಾಗಿ ಇತರೆ ಜನ ಸಮುದಾಯದ ಜೊತೆಗೂಡಿ ಹೋರಾಟ ನಡೆಸಬೇಕೆಂದು ಕರೆ ನೀಡಿದರು.

ದೇಶದ ರಾಜಧಾನಿ ದೆಹಲಿಯಲ್ಲಿ ನಡೆದ 40-50 ವರದಕ್ಷಿಣೆ ಪ್ರಕರಣಗಳನ್ನು ನಮ್ಮ ಸಂಘಟನೆ ಕೈಗೆತ್ತಿಕೊಂಡು ಹೋರಾಟ ನಡೆಸಿದೆ ಎಂದು ಉದಾಹರಿಸಿದ ಕಾಂ. ಸುಶೀಲ ಗೋಪಾಲನ್‌ರವರು ರಾಜಸ್ಥಾನದ ಸತಿ ಪ್ರಕರಣವನ್ನು ರಾಜೀವ್ ಗಾಂಧಿ ಸರ್ಕಾರ ಆತ್ಮಹತ್ಯೆ ಎಂದು ತೀರ್ಮಾನಿಸುವುದರ ಮೂಲಕ ಮಹಿಳಾ ಸಮುದಾಯಕಕ್ಕೆ ಘೋರ ಅಪಚಾರವೆಸಗಿದ್ದಾರೆಂದರು. ದೇಶದಾದ್ಯಂತ ಈ ತೀರ್ಮಾನ ಖಂಡಿಸಿ ವ್ಯಾಪಕ ಸಹಿ ಸಂಗ್ರಹ ಚಳುವಳಿ ಕೈಗೊಳ್ಳುತ್ತಿರುವುದಾಗಿ ಹೇಳಿದರು.

ಆಸ್ತಿಯ ಹಕ್ಕು, ಕುಟುಂಬದಲ್ಲಿ ಬರುವ ವೈಮನಸ್ಯ, ಆತ್ಮಹತ್ಯೆ, ವರದಕ್ಷಿಣೆ, ದುಡಿಯುವ ಮಹಿಳೆಯರ ಮೂಲ ಭೂತ ಪ್ರಶ್ನೆಗಳ ಕುರಿತು ಪರಿಣಾಮಕಾರಿ ಕ್ರಮಕೈಗೊಳ್ಳಲು ರಾಷ್ಟ್ರೀಯ ಮಟ್ಟದಲ್ಲಿ ಮಹಿಳಾ ಕಮಿಷನ್ ಒಂದನ್ನು ನೇಮಕ ಮಾಡಬೇಕೆಂದು ಅವರು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದರು.

ಕರ್ನಾಟಕದಲ್ಲಿ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಮಾತನಾಡಿದ ರಾಜ್ಯ ಸಂಚಾಲಕಿ ಶ್ರೀಮತಿ ಹರಿಣಿಕಕ್ಕೇರಿಯವರು ಕರ್ನಾಟಕದಲ್ಲಿ ಮಹಿಳೆಯರು ಶೌಚಾಲಯ ಸೌಲಭ್ಯವಿಲ್ಲದೆ ಅವಮಾನಕರ ಜೀವನ ಸಾಗಿಸುವ ಪರಿಸ್ಥಿತಿ, ಮಾಸಾಶನ, ವಿಧವಾ ವೇತನ, ಕನಿಷ್ಟ ಕೂಲಿಯಂತಹ ಗಂಭೀರ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಅವುಗಳ ವಿರುದ್ಧ ಹೋರಾಟ ನಡೆಸಬೇಕಾಗಿದೆ ಎಂದು ಹೇಳಿದರು.

ಬೆಂಗಳೂರಿನ ಚಟುವಟಿಕೆಗಳ ವರದಿಯನ್ನು ಸಂಚಾಲಕಿ ಶ್ರೀಮತಿ ವಿಮಲರವರು ಮಂಡಿಸಿದರು. ಸಿ.ಐ.ಟಿ.ಯು. ರಾಜ್ಯ ಖಜಾಂಚಿಯವರಾದ ಎನ್.ಕೆ. ಉಪಾಧ್ಯಾಯರು, ಅಖಿಲ ಭಾರತ ವಕೀಲರ ಸಂಘ (ಎ.ಐ.ಎಲ್.ಯು.) ದ ರಾಜ್ಯ ಸಮಿತಿ ಸದಸ್ಯೆ ಶ್ರೀಮತಿ ಹೇಮಾವತಿ ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯದರ್ಶಿ ಕಾಂ. ಪಿ.ಜಗನ್ನಾಥ್, ಎಸ್.ಎಫ್.ಐ. ರಾಜ್ಯ ಉಪಾಧ್ಯಕ್ಷೆ ಕೆ.ಶ್ರೀಮತಿಯವರು ಶುಭಾಶಯ ಕೋರಿ ಮಾತನಾಡಿದರು.

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿ ಕಾಂ ಪಿ. ರಾಮಚಂದ್ರರಾವ್‌ರವರು ಆದಿಮ ಸಮಾಜ, ಪಾಳೆಯಗಾರಿ, ಗುಲಾಮ ಸಮಾಜದಿಂದಲೂ ಇಂದಿನವರೆಗೆ ಮಹಿಳೆ ಹೇಗೆ ಪ್ರಧಾನತೆಯನ್ನು ಕಳೆದುಕೊಳ್ಳುತ್ತಾ ಬಂದಿರುವಳೆಂಬ ಚಾರಿತ್ರಿಕ ಇತಿಹಾಸ ಹಾಗೂ ತಮ್ಮ ವೈಯುಕ್ತಿಕ ಅನುಭವಗಳನ್ನು ವಿವರಿಸಿದರು.

ರಾಜ್ಯದ ವಿವಿಧ ಜಿಲ್ಲೆಗಳಿಂದ ತಮ್ಮ ಪುಟ್ಟ ಕಂದಮ್ಮಗಳೊಂದಿಗೆ ಬಂದ 200 ಪ್ರತಿನಿಧಿಗಳು ಭಾಗವಹಿಸಿದ ಸಭೆಯಲ್ಲಿ ಹಲವಾರು ಪ್ರತಿನಿಧಿಗಳು ಚರ್ಚೆಯಲ್ಲಿ ಭಾಗವಹಿಸಿದ್ದರು. 'ಕುದುರೆ ಮೋತಿ' ಪ್ರಕರಣದಲ್ಲಿ ದಬ್ಬಾಳಿಕೆಗೊಳಗಾದ ಶ್ರೀಮತಿ ಪಾರ್ವತಮ್ಮ ತುಂಬ ಆವೇಶ ಭರಿತರಾಗಿ ಮಾತನಾಡಿದರು. ಎಲ್ಲರೂ ಸಂಘಟನೆಯನ್ನು ಬಲಿಷ್ಟವಾಗಿ ಹಾಗೂ ವಿಶಾಲ ತಳಹದಿಯಲ್ಲಿ ಕಟ್ಟಿ ಬೆಳೆಸುವ ಆಶಯಗಳನ್ನು ವ್ಯಕ್ತಪಡಿಸಿದರು.

ಈ ಸಭೆಯಲ್ಲಿ ಕಾಂ.ಹರಿಣಿ ಕಕ್ಕೇರಿಯವರು ಸಂಚಾಲಕರಾಗಿರುವ 25 ಜನರ ಸಂಘಟನಾ ಸಮಿತಿಯನ್ನು ರಚಿಸಲಾಯಿತು.

ಬುಲ್ಡೋಜರ್‌ಗಳನ್ನು ಎದುರಿಸಿದ ರೈತರು

ಬೆಳಗಾಂ ಜಿಲ್ಲೆ ಸೌದತ್ತಿ ತಾಲ್ಲೋಕಿನಲ್ಲಿ ಹತ್ತಾರು ವರ್ಷಗಳಿಂದ ಬಗರ್-ಹುಕುಂ ಸಾಗುವಳಿ ಮಾಡಿ ಜೀವನ ನಡೆಸುತ್ತಿರುವ ಭೂಹೀನ ಬಡ ರೈತರನ್ನು ಅರಣ್ಯ ಇಲಾಖೆಯವರು ಬುಲ್‌ಡೋಜರ್ ಉಪಯೋಗಿಸಿ ಒಕ್ಕಲೆಬ್ಬಿಸಲು ನಡೆಸಿದ ಸತತ ಪ್ರಯತ್ನಗಳನ್ನು ಕರ್ನಾಟಕ ಪ್ರಾಂತ ರೈತ ಸಂಘದ ರೈತರು ಹಿಮ್ಮೆಟ್ಟಿಸಿ ಹೋರಾಟ ನಡೆಸುತ್ತಿದ್ದಾರೆ.

ಸವದತ್ತಿ ತಾಲ್ಲೋಕಿನ ಸೊಗಲ ಕ್ಷೇತ್ರದ ಗುಡ್ಡದ ಬಳಿ ಇರುವ ಮಲ್ಲೂರ, ಕಾರ್ಲಹಟ್ಟಿ, ಮತ್ತು ಯಕ್ಕುಂಡಿ ಗ್ರಾಮಗಳಿಗೆ ಬುಲ್‌ಡೋಜರ್ ಜೊತೆ ಬಂದ ಅಧಿಕಾರಿಗಳನ್ನು ರೈತ ಸಂಘದ ಕಾರ್ಯಕರ್ತರು ಕೆಂಬಾವುಟ ಬ್ಯಾನರ್ ಹಿಡಿದು ಒಂದು ವಾರಗಳ ಕಾಲ ಸತತವಾಗಿ ಪ್ರತಿಭಟಿಸಿ ತೀವ್ರ ಪ್ರತಿರೋಧ ಒಡ್ಡಿದರು. ಜನವರಿ 20ರಂದು ಸೊಗಲ ಗ್ರಾಮದಲ್ಲಿ ಸುತ್ತ ಮುತ್ತಲಿನ ಹಳ್ಳಿಗಳಿಂದ ಬಂದು ನೆರೆದ ಬೃಹತ್ ರೈತರ ಸಭೆಯನ್ನು ನಡೆಸಿ ಎಚ್ಚರಿಸಲಾಯಿತು.

ಬೇರೆ ದಾರಿ ಕಾಣದ ಅರಣ್ಯ ಅಧಿಕಾರಿಗಳು ಅಲ್ಲಿಂದ ಬುಲ್‌ಡೋಜರ್ ಜೊತೆ ಕಾಲುಕಿತ್ತು 12ಕಿ.ಮೀದೂರದ ಮುನವಳ್ಳಿ ಗ್ರಾಮ ಬಂದು ಸೇರಿದರು ಹೊಸ ಗ್ರಾಮ ಅರಸಿ ಬಂದ ಬುಲ್‌ಡೋಜರ್ ಹಿಂದೆಯೇ ರೈತ ಸಂಘದ ಕೆಂಬಾವುಟ ಬೆನ್ನಟ್ಟಿ ಬಂತು. ಮತ್ತೆ ಎಂದಿನಂತೆ ಪ್ರತಿಭಟನೆ ಬಹಿರಂಗ ಸಭೆಗಳು ಮುಂದುವರಿದಿವೆ.

ಬಗರ್ ಹುಕುಸಾಗುವಳಿ ಮಾಡುವ ರೈತರ ಭೂಮಿಯನ್ನು ಸಕ್ರಮಗೊಳಿಸುವುದಾಗಿ ರಾಜ್ಯ ಸರ್ಕಾರ ವಿಧಾನ ಸಭೆಯಲ್ಲಿ ಕಾಯದೆ ತಿದ್ದುಪಡಿ ಮಸೂದೆಯನ್ನು ತರುವುದಾಗಿ ಆಶ್ವಾಸನೆ ನೀಡುತ್ತಾ ಬಂದಿರುವ ಸರ್ಕಾರದ ನಿರ್ಲಕ್ಷ್ಯನೀತಿ ಖಂಡನೀಯ. ಈ ಕೂಡಲೇ ಸವದತ್ತಿ ರೈತರನ್ನು ಒಕ್ಕಲೆಬ್ಬಿಸುವುದನ್ನು ನಿಲ್ಲಿಸಿ ಎಲ್ಲಾ ಭೂಹೀನ ಬಡ ರೈತರ ಸಾಗುವಳಿ ಭೂಮಿಯನ್ನು ಸಕ್ರಮಗೊಳಿಸುವಂತೆ ಹಾಗೂ ಅರಣ್ಯ ಅಧಿಕಾರಿಗಳು ಬುಲ್‌ಡೋಜರ್ ಉಪಯೋಗಿಸಿ ರೈತರಿಗೆ ನೀಡುತ್ತಿರುವ ಕಿರುಕುಳ ನಿಲ್ಲಿಸುವಂತೆ ಪ್ರಾಂತ ರೈತ ಸಂಘದ ರಾಜ್ಯ ಕಾರ್ಯದರ್ಶಿ ಕಾಂ. ಪಿ.ಜಗನ್ನಾಥ್‌ರವರು ರಾಜ್ಯ ಕಂದಾಯ ಸಚಿವ ಎಸ್.ಆರ್. ಬೊಮ್ಮಾಯಿಯವರಿಗೂ ಬೆಳಗಾಂ ಜಿಲ್ಲಾಧಿಕಾರಿ ಹಾಗೂ ಸವದತ್ತಿ ತಾಲ್ಲೋಕು ತಹಶೀಲ್ದಾರ್‌ರವರಿಗೆ ಒತ್ತಾಯಿಸಿದ್ದಾರೆ. ಈ ಕುರಿತು ಕೂಡಲೇ ರೈತರಿಗೆ ರಕ್ಷಣೆ ನೀಡದಿದ್ದರೆ ಜಿಲ್ಲೆಯಾದ್ಯಂತ ಉಗ್ರ ಹೋರಾಟ ನಡೆಸಲಾಗುವುದೆಂದು ರೈತ ಸಂಘ ಎಚ್ಚರಿಸಿದೆ. ●

ಬಿಜಾಪುರ 300 ರೈತರ ಬಂಧನ

ಕರ್ನಾಟಕ ಪ್ರಾಂತ ರೈತ ಸಂಘದ ಬಿಜಾಪುರ ಜಿಲ್ಲಾ ರೈತ ಸಂಘದ ನೇತೃತ್ವದಲ್ಲಿ ಜಿಲ್ಲೆಯ ರೈತರು ಎದುರಿಸುತ್ತಿರುವ ಜ್ವಲಂತ ಸಮಸ್ಯೆ ಹಾಗೂ ಬೆಲೆ ಏರಿಕೆಯನ್ನು ಪ್ರತಿಭಟಿಸಿ ಫೆಬ್ರವರಿ 4ರಿಂದ 7ರವರೆವಿಗೆ ಬಿಜಾಪುರದ ಗಾಂಧಿ ಚೌಕದಲ್ಲಿ ಸತ್ಯಾಗ್ರಹ ನಡೆಸುತ್ತಿದ್ದ ರೈತ ಸಂಘ ಫೆಬ್ರುವರಿ 6ರಂದು ಬಿಜಾಪುರಕ್ಕೆ ಆಗಮಿಸಿದ ಕೇಂದ್ರ ಗೃಹ ಮಂತ್ರಿ ಬೂಟಾಸಿಂಗ್ ಹಾಗೂ ರಾಜ್ಯ ಗೃಹ ಮಂತ್ರಿ ಆರ್. ಎಲ್. ಜಾಲಪ್ಪನವರಿಗೆ ತಮ್ಮ ಬೇಡಿಕೆಗಳ ಮನವಿ ಅರ್ಪಿಸಲು ಶಾಂತ ರೀತಿಯಿಂದ ತೆರಳಿದ ಮಹಿಳೆ ಮಕ್ಕಳನ್ನು ಒಳಗೊಂಡ ನೂರಾರು ರೈತರನ್ನು ಬಂಧಿಸಿ ಪೋಲಿಸ್ ಠಾಣೆಯಲ್ಲಿ ಅಮಾನುಷವಾಗಿ ಥಳಿಸಲಾಗಿದೆ. ರೈತ ಸಂಘದ ಕಾರ್ಯಕರ್ತ ಕಾಂ. ಪ್ಯಾಮನಗೌಡ ಬಿರಾದಾರರವರು ಮೂರ್ಛೆ ಬೀಳುವವರಿಗೆ ಹೊಡೆಯಲಾಗಿದೆ. ಮುನ್ನೂರು ರೈತರನ್ನು ಬಂಧಿಸಿದ ಪೋಲಿಸರು 113 ರೈತರ ಮೇಲೆ ಮೊಕದ್ದಮೆ ಹಾಕಲಾಗಿದೆ. ಫೆ 8 ರಂದು 9 ಮಂದಿ ಕಾರ್ಯಕರ್ತರ ಮೇಲೆ ಮತ್ತೆ ಕೇಸು ಹಾಕಲಾಗಿದೆ. ಬಿಜಾಪುರ ಗ್ರಾಮೀಣ ಪಿ.ಎಸ್.ಐ. ಮತ್ತು ಬ. ಬಾಗೇವಾಡಿ ಸಿ.ಪಿ.ಐ. ಹಾಗೂ ಸಿಂದಗಿ ಪಿ.ಎಸ್.ಐ.ಗಳು ನಡೆಸುತ್ತಿರುವ ಅನ್ಯಾಯ ಅತ್ಯಾಚಾರ ಭ್ರಷ್ಟಾಚಾರಗಳನ್ನು ರೈತ ಸಂಘ ಬಯಲಿಗೆಳೆದು ಭ್ರಷ್ಟಾಚಾರಿ ಪೋಲಿಸ್ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿ ಸಿ.ಓ.ಡಿ. ತನಿಖೆಗೆ ಒತ್ತಾಯಿಸಲಾಗಿತ್ತು.

ರೈತ ಸಂಘದ ಪ್ರಮುಖ ಬೇಡಿಕೆಗಳು

ಮುಳವಾಡ ಯಾತ ನೀರಾವರಿ ಕೆಲಸ ಪ್ರಾರಂಭಮಾಡಬೇಕು, ಆಲಮಟ್ಟಿ ಅಣ್ಣೆಕಟ್ಟು ಪೂರ್ಣಗೊಳಿಸಬೇಕು, ಕೃಷ್ಣಾ ಮೇಲ್ದಂಡೆ ಕಾಲುವೆ ಪೂರ್ಣಗೊಳಿಸಬೇಕು. ಭೀಮಾನದಿ ಬಂದರು ಮುಗಿಸಬೇಕು, ಸರ್ಕಾರಿ ಭೂಮಿ ಸಾಗುವಳಿ ಮಾಡುವವರಿಗೆ ಹಕ್ಕು ಪತ್ರ, ಏರಿಸಿರುವ ಬೆಲೆಗಳನ್ನು ಇಳಿಸಬೇಕು. ಕೃಷಿ ಕೂಲಿಗಾರರಿಗೆ ಕನಿಷ್ಟ ಕೂಲಿ, ಬೆಳೆನಾಶದಿಂದ ನಷ್ಟಕ್ಕೀಡಾದ ರೈತರಿಗೆ ಪರಿಹಾರ, ಹರಿಜನ-ಗಿರಿಜನರಿಗೆ ಮನೆ ಕಟ್ಟಿಸಿಕೊಡಬೇಕು, ರೇಷನ್ ಕಾರ್ಡ್ ಎಲ್ಲರಿಗೂ ನೀಡಬೇಕು, ಮುಂತಾದ ಬೇಡಿಕೆಗಳನ್ನು ಒಳಗೊಂಡು ನಡೆದ ಈ ಹೋರಾಟದ ಮುಂದಿನ ಹಂತದ ಹೋರಾಟಕ್ಕೆ ಸಿದ್ಧರಾಗಲು ರೈತ ಸಂಘ ಜಿಲ್ಲೆಯ ರೈತರಿಗೆ ಕರೆ ನೀಡಿದೆ.

ಎಸ್.ಎಫ್.ಐ. ರಾಜ್ಯ ಸಮಿತಿ ತೀರ್ಮಾನಗಳು

ಭಾರತ ವಿದ್ಯಾರ್ಥಿ ಫೆಡರೇಷನ್ ಕರ್ನಾಟಕ ರಾಜ್ಯ ಸಮಿತಿ ಸಭೆ ಫೆಬ್ರವರಿ 4, 5, ರಂದು ಬೆಂಗಳೂರಿನಲ್ಲಿ ರಾಜ್ಯ ಅಧ್ಯಕ್ಷ ಕಾ||ಜಿ.ಸಿ.ಬೈಯಾರೆಡ್ಡಿಯವರ ಅಧ್ಯಕ್ಷತೆಯಲ್ಲಿ ಜರುಗಿತು. ಅಖಿಲ ಭಾರತ ಎಸ್. ಎಫ್. ಐ. ಅಧ್ಯಕ್ಷರಾದ ಕಾ||ಎ.ವಿಜಯರಾಘವನ್‌ರವರು ಉಪಸ್ಥಿತರಿದ್ದರು. ರಾಜ್ಯದ ವಿದ್ಯಾರ್ಥಿ ಸಮುದಾಯ ಎದುರಿಸುತ್ತಿರುವ ಹಲವಾರು ಶೈಕ್ಷಣಿಕ ಸಮಸ್ಯೆಗಳ ಕುರಿತು ರಾಜ್ಯ ಸಮಿತಿ ನಿರ್ಣಯ ಕೈಗೊಂಡಿದೆ.

ಶಿಕ್ಷಕರ ತರಬೇತಿ (ಟಿ.ಸಿ.ಹೆಚ್.) ಪ್ರವೇಶಕ್ಕೆ ಪಿ.ಯು.ಸಿ. ಉತ್ತೀರ್ಣ ಕಡ್ಡಾಯಗೊಳಿಸಿರುವ ರಾಜ್ಯ ಸರ್ಕಾರದ ನೀತಿಯನ್ನು ಖಂಡಿಸಿ ಡೊನೇಷನ್ ವಸೂಲಿ ರದ್ದುಗೊಳಿಸಲು ಒತ್ತಾಯಿಸಿದೆ. ಬೆಂಗಳೂರು ವಿ.ವಿ.ವಾಸ್ತುಶಿಲ್ಪ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿ ಆತ್ಮಹತ್ಯೆ ಪ್ರಕರಣಕ್ಕೆ ತನ್ನ ಆತಂಕ ವ್ಯಕ್ತಪಡಿಸಿ ವಿ.ವಿ.ಯ ಪರೀಕ್ಷಾ ನೀತಿ, ಆಡಳಿತಾತ್ಮಕ ದೋಷಗಳನ್ನು ಹೋಗಲಾಡಿಸಲು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದೆ. ಗುಲ್ಬರ್ಗಾ ವಿ.ವಿ.ಯಲ್ಲಿ 40 ವಿದ್ಯಾರ್ಥಿಗಳ ಅಂಕ ಪತ್ರಗಳನ್ನು ಅಕ್ರಮವಾಗಿ ತಿದ್ದಿರುವ ಪ್ರಕರಣವನ್ನು ಸಿ.ಓ.ಡಿ. ತನಿಖೆ ನಡೆಸಬೇಕೆಂದು ಕೇಳಿದೆ.

ಬೆಂಡಿಗೇರಿ-ತತ್ತೂರಿನಲ್ಲಿ ದಲಿತರಿಗೆ ಮಲ ತಿನ್ನಿಸಿದ ಅಮಾನವೀಯ ಕೃತ್ಯಗಳಿಗೆ ಕಾರಣರಾದ ಭೂಮಾಲಿಕ ಪಟ್ಟಭದ್ರ ಹಿತಾಸಕ್ತಿಗಳನ್ನು ಪ್ರಗತಿಪರ ಶಕ್ತಿಗಳು ಖಂಡಿಸಿ ಹೋರಾಟ ನಡೆಸಲು ಕರೆ ನೀಡಿವೆ. 17 ಅಂಶಗಳ ಪರ್ಯಾಯ ಬೇಡಿಕೆ ಮುಂದಿಟ್ಟು, ದೇಶದ ಎಡ ಪ್ರಜಾಸತ್ತಾತ್ಮಕ ವಿರೋಧ ಪಕ್ಷಗಳು ಮಾರ್ಚ್ 15 ರಂದು 'ಭಾರತ್ ಬಂದ್'ಗೆ ನೀಡಿರುವ ಕರೆಗೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸಲು ಹಾಗೂ ಏಪ್ರಿಲ್ 3 ರಂದು ಬೆಂಗಳೂರಿನಲ್ಲಿ ಜರುಗುವ ಅಖಿಲ ಭಾರತ ಕಿಸಾನ್ ಸಭಾ ಕೇಂದ್ರ ಸಮಿತಿ ಸಭೆ ಹಾಗೂ 'ಲಕ್ಷ ರೈತರ ವಿಧಾನ ಸಭಾ ಚಲೋ' ಕಾರ್ಯಕ್ರಮ ಯಶಸ್ವಿಗೊಳಿಸಲು ಕರೆ ನೀಡಲಾಗಿದೆ.

ಅಲ್ಪಮತದ ಸರ್ಕಾರ ತ್ರಿಪುರಾವನ್ನು ಆಳುತ್ತಿದೆ

– ನೃಪೇನ್ ಚಕ್ರವರ್ತಿ

ಕಾಂಗ್ರೈ – ಟಿ.ಯು ಜೆ.ಎಸ್. ಕೂಟದ ಕೇವಲ ಶೇ.48 ರಷ್ಟು ಮಾತ್ರ ಮತಗಳನ್ನಿದ್ದರೂ ಎಡರಂಗ ಶೇ50.5 ರಷ್ಟು ಮತಗಳನ್ನು ಈ ಕಾಂಗ್ರೈಗಿಂತ ಶೇ.2ರಷ್ಟು ಹೆಚ್ಚು ಪಡೆದಿದ್ದರೂ ಇಂದು ತ್ರಿಪುರಾವನ್ನು ಆಳುತ್ತಿರುವುದು ಕಾಂಗ್ರೈ – ಟಿ. ಯು ಜೆ.ಎಸ್.ನ ಅಲ್ಪ ಮತದ ಸರ್ಕಾರ ಎಂದು ಮಾಜಿ ಮುಖ್ಯ ಮಂತ್ರಿ ನೃಪೇನ್ ಚಕ್ರವರ್ತಿ ದೆಹಲಿಯಲ್ಲಿ ಕರೆದ ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು.

ತ್ರಿಪುರಾದಲ್ಲಿ 10 ವರ್ಷಗಳ ಕಾಲ ಎಡರಂಗ ಪೋಷಿಸಿ ಕೊಂಡು ಬಂದ ಗಿರಿಜನ ಹಾಗೂ ಗಿರಿಜನೇತರ ಐಕ್ಯತೆಯನ್ನು ಒಡೆಯುವ ಕೋಮುವಾದವನ್ನು ತೀವ್ರವಾಗಿ ಉದ್ರೇಕಿಸುವ ಪ್ರಚಾರವನ್ನು ಈ ಚುನಾವಣೆಯ ಕಾಲದಲ್ಲಿ ಕಾಂಗ್ರೈ ಕೈಗೊಂಡಿದೆ. ಗಿರಿಜನರ ನಡುವೆ ಟಿಯುಜೆಎಸ್ ಹಾಗೂ ಅದರ ವಿದ್ಯಾರ್ಥಿ ಸಂಘಟನೆ 1929ರ ನಂತರ ತ್ರಿಪುರಾಕ್ಕೆ ಬಂದವರೆಲ್ಲಾ ವಿದೇಶಿಯರು ಅವರನ್ನು ಹೊರದೂಡಬೇಕು ಎಂದು ಪ್ರಚಾರ ಮಾಡಿತು. ಕಾಂಗ್ರೈ ಈ ಟಿಯುಜೆಎಸ್ ನೊಂದಿಗೆ ಅಪವಿತ್ರ ಮೈತ್ರಿ ಮಾಡಿಕೊಂಡಿದ್ದರೆ ಮತ್ತೊಂದು ಕಡೆ ಬಂಗಾಲಿಗಳ ನಡುವೆ ವಿಚ್ಛಿದ್ರಕಾರೀ ಚಟುವಟಿಕೆ ನಡೆಸುತ್ತಿರುವ ಆಮ್ರ ಬಂಗಾಲಿಗಳ ಬಗ್ಗೆ ಕಾಂಗ್ರೈ ಚುನಾವಣಾ ಘೋಷಣೆಯಲ್ಲಿ ಒಂದೇ ಒಂದು ಖಂಡನೆಯ ಮಾತಿಲ್ಲ. ಬಂಗಾಲಿಗಳ ನಡುವೆಯಂತೂ ಉದ್ರೇಕವನ್ನು ಕೆರಳಿಸಲು ಆಮ್ರ ಬಂಗಾಲಿಗಳನ್ನು ಬಳಸಿಕೊಂಡಿದೆ. ಹೀಗೆ ಎರಡು ಜನ ವಿಭಾಗಗಳಲ್ಲಿ ಒಂದರ ವಿರುದ್ಧ ಮತ್ತೊಂದನ್ನು ಎತ್ತಿ ಕಟ್ಟಿ ಎಡರಂಗ ಬೆಳೆಸಿದ ಐಕ್ಯತೆಯನ್ನು ಒಡೆದಿದೆ.

ಕಾಂಗ್ರೈ ಭ್ರಷ್ಟಾಚಾರಕ್ಕೆ ಸರ್ಕಾರದ ಅಧಿಕಾರಿಗಳ ಶಾಮೀಲು

ಚುನಾವಣೆಗೆ ಇನ್ನೇನು ಎರಡು ದಿನಗಳಿರುವಂತೆ ಸೈನ್ಯವನ್ನು ಕಳಿಸಿದ ನಂತರ ಕೇಂದ್ರ ಸೇವೆಗಳಾದ ಐ.ಎ.ಎಸ್,ಐ.ಪಿ.ಎಸ್ ಅಧಿಕಾರಿಗಳು ಕಾಂಗ್ರೈನ ಚುನಾವಣಾ ಭ್ರಷ್ಟಾಚಾರದೊಂದಿಗೆ ಶಾಮೀಲಾದರು. ಅನೇಕ ರೀತಿಯಲ್ಲಿ ನಡೆದ ಚುನಾವಣಾ ಭ್ರಷ್ಟಾಚಾರಗಳ ನಿರ್ದೇಶನ, ನೇತೃತ್ವ ವಹಿಸಿದ್ದು ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ಚಿದಂಬರಂ ಹಾಗೂ ವಾರ್ತಾ ಸಚಿವ ಸಂತೋಷ್ ಮೋಹನ್ ದೇಬ್. ಇವರು ಮತಗಟ್ಟೆಗಳಲ್ಲಿ ಮತ ಎಣಿಕೆ ಕೇಂದ್ರಗಳಲ್ಲಿ ತ್ರಿಪುರಾ ಪೊಲೀಸ್ ಪಡೆಗಳು ತಮ್ಮ ಕಾರ್ಯ ನಿರ್ವಹಿಸುವುದಕ್ಕೆ ತಡೆಯೊಡ್ಡಿದರು. ಕೇಂದ್ರ ಮೀಸಲು ಪಡೆಗಳನ್ನು ಬಳಸುವಂತೆ ಆದೇಶ ನೀಡಿದರು ಎಂದು ನೃಪೇನ್ ಚಕ್ರವರ್ತಿ ತಿಳಿಸಿದರು. ಚುನಾವಣೆಗಳಲ್ಲಿ ನಡೆದ ಭ್ರಷ್ಟಾಚಾರಗಳ ಬಗ್ಗೆ ಮತದಾನ ಸಮಯದಲ್ಲಿ ಮತ ಎಣಿಕೆ ಸಮಯದಲ್ಲಿ ನಡೆಸಿದ ಸಂಘಟಿತ ಥಾಳಿಯ ಬಗ್ಗೆ ಚುನಾವಣಾ ಕಾನೂನನ್ನು ಕೇಂದ್ರ ಮಂತ್ರಿಗಳೇ ಉಲ್ಲಂಘಿಸಿದ ಬಗ್ಗೆ ಆಧಾರ ಸಹಿತ ದಾಖಲೆಗಳಿವೆ. ಕನಿಷ್ಟ ಐದು ಕ್ಷೇತ್ರಗಳಲ್ಲಿ ಚುನಾವಣಾ ಭ್ರಷ್ಟಾಚಾರದ ಬಗ್ಗೆ ದಾಖಲೆಗಳಿವೆ. ಈ ಎಲ್ಲಾ ಭ್ರಷ್ಟಾಚಾರಗಳ ಬಗ್ಗೆ ಕಾನೂನು ಪ್ರಕಾರ ಕ್ರಮ ಕೈಕೊಳ್ಳುತ್ತೇನೆ ಎಂದು ನೃಪೇನ್ ತಿಳಿಸಿದರು.

ಎಡ ಕಾರ್ಯಕರ್ತರ ಮೇಲೆ ಕಾಂಗ್ರೈ ಧಾಳಿ ಆರಂಭ

ತ್ರಿಪುರಾದಲ್ಲಿ ಎಡ ಪಕ್ಷಗಳ, ಅದರಲ್ಲಿಯೂ ಸಿ.ಪಿ.ಐ. (ಎಂ) ಕಾರ್ಯಕರ್ತರ ಮೇಲೆ ಕಾಂಗ್ರೆಸ್ (ಐ) ವ್ಯಗೀಯ ಆಕ್ರಮಣವನ್ನು ಈಗಾಗಲೇ ಆರಂಭಿಸಿದೆ. ಚುನಾವಣೆಯಾದ ದಿವಸದಿಂದಲೇ ಆರಂಭವಾದ ಕಾಂಗ್ರೈ ಧಾಳಿ ಈ 4 ದಿನಗಳಲ್ಲಿ 5 ಸಿ.ಪಿ.ಐ (ಎಂ) ಕಾರ್ಯಕರ್ತರನ್ನು ಕಾಂಗ್ರೈ–ಟಿಯುಜೆಎಸ್ ಕೊಲೆಗಡುಕರು ಕೊಂದಿದ್ದಾರೆ. ನೂರಾರು ಕಡೆ ನಡೆದ ಆಕ್ರಮಣದಲ್ಲಿ ಈ 5 ಜನ ಕೊಲೆಯಾಗಿದ್ದಾರೆ.

ಮುಖ್ಯ ಮಂತ್ರಿ ಸುಧೀರ್ ಮಜುಂದಾರ್‌ರವರೂ ಸೇರಿದಂತೆ ಕಾಂಗ್ರೈಯ ರಾಜ್ಯನಾಯಕರು ಈ ಧಾಳಿಗಳಿಗೆ ನೇತೃತ್ವ ನೀಡಿದ್ದಾರೆ. ಗೂಂಡಾಗಳನ್ನು ಉಪಯೋಗಿಸಿ ದೈಹಿಕವಾಗಿ ಆಕ್ರಮಣ ಮಾಡುವುದರ ಜೊತೆಯಲ್ಲಿ ಪೋಲಿಸರು, ಮತ್ತು ಸರ್ಕಾರದ ಇತರರನ್ನು ಉಪಯೋಗಿಸಿ ಇಡೀ ತ್ರಿಪುರಾದಲ್ಲಿ ಧಾಳಿ ದಬ್ಬಾಳಿಕೆ ಆರಂಭವಾಗಿದೆ. ಇದಕ್ಕೆ ಆಯ್ಕೆಯಾದ ಸಿ ಪಿ.ಐ. (ಎಂ) ಶಾಸಕರೂ ಬಲಿಯಾಗಿದ್ದಾರೆ. ದಕ್ಷಿಣ ತ್ರಿಪುರಾದ ಉದಯಪುರದ ಶಾಸಕರು ಸಿ.ಪಿ ಮಲ್ಲೂಸರ್‌ರವರನ್ನು ಬಂಧಿಸಲು ಮುಖ್ಯಮಂತ್ರಿಯೂ ಸೇರಿ ಐದು ಮಂತ್ರಿಗಳು ಪ್ರಯತ್ನ ಪಟ್ಟಿದ್ದಾರೆ. ಯಾವ ಕಾರಣವೂ ಇಲ್ಲದೆ ಇವರನ್ನು ಬಂಧಿಸಿ ಕೇಂದ್ರ ಪೋಲೀಸ್ ಪಡೆಯನ್ನು ಪಯೋಗಿಸಿ ಹಿಂಸೆ ಮಾಡಿದ್ದಾರೆ.

ಚುನಾವಣೆಗೆ ಬಂದಂತಹ ಅರೆ ಸೈನಿಕ ಪಡೆಗಳನ್ನು ಪಯೋಗಿಸಿ ನಡೆಸುತ್ತಿರುವ ಈ ಆಕ್ರಮಣದಿಂದ ಶಾಂತಿಯನ್ನು ಕಾಪಾಡಬೇಕೆಂದು ತ್ರಿಪುರಾದ ಮಾಜಿ ಮುಖ್ಯ ಮಂತ್ರಿ ನೃಪೇನ್ ಚಕ್ರವರ್ತಿ ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ಮನವಿ ಮಾಡಿದ್ದಾರೆ.

ಕಾಂಗ್ರೈನಿಂದ ಮತ್ತಷ್ಟು ಉಗ್ರಧಾಳಿ

ತ್ರಿಪುರಾದಲ್ಲಿ ಪಕ್ಷದ ಕಛೇರಿಗಳ ಮೇಲೆ ಕಾರ್ಯಕರ್ತರ ಮನೆಗಳ ಮೇಲೆ ಪಕ್ಷದ ಪತ್ರಿಕೆ ದೇಶೇರ್‌ಕಥಾ ಕಛೇರಿಯ ಮೇಲೆ ಬಾಂಬ್‌ಗಳನ್ನು ಹಾಕಿ ಮನೆಗಳನ್ನು ಒಡೆದು ಕಾಂಗ್ರೈನವರು ವಿಜಯೋತ್ಸವವನ್ನು ಆಚರಿಸುತ್ತಿದ್ದಾರೆ. ಇಡೀ ತ್ರಿಪುರಾದಲ್ಲಿ ಈ ಆಕ್ರಮಣಗಳು ನಡೆಯುತ್ತಿವೆ. ಈ ದಬ್ಬಾಳಿಕೆಯಲ್ಲಿ ಮಾಜಿ ಮಂತ್ರಿಗಳೂ ತುತ್ತಾಗಿದ್ದಾರೆ. ರಾಜಧಾನಿಯಾದ ಅಗರ್ತಲಾದಲ್ಲಿ ನೃಪೇನ್ ಸಂಪುಟದಲ್ಲಿ ಮಂತ್ರಿಯಾಗಿದ್ದ ಅರುಣ್‌ಸರ್ಕಾರ್‌ರ ಮನೆಗೆ ಶುಕ್ರವಾರ ಬಾಂಬ್ ಹಾಕಿದರು. ಅಲ್ಲಿಂದ ರೌಡಿ ಗುಂಪು ಪಕ್ಷದ ಪತ್ರಿಕೆ ದೇಶೇರ್‌ಕಥಾ ಕಛೇರಿಗೆ ತೆರಳಿ ಬಾಂಬ್‌ಗಳ ಧಾಳಿ ಮಾಡಿದರು. ಮುದ್ರಣಾಲಯದಲ್ಲಿ ಕೆಲಸ ಮಾಡುತ್ತಿದ್ದ ಇಬ್ಬರಿಗೆ ಗಾಯಗಳಾಗಿವೆ.

ನಗರ ಸಭೆ ಸದಸ್ಯ ನಾರಾಯಣ್ ದೇಬ್‌ನಾಥ್, ಅಧ್ಯಾಪಕ ಸಂಘಟನೆಯ ನಾಯಕ ನಿಖಿಲ್‌ನಾಥ್ ಶಾಸಕ ಕೇಶವ ಮಜುಂದಾರ್ ಮಜ್ಲಿಸ್‌ಪುರದಲ್ಲಿ ವಿಜೇತರೆಂದು ಈ ಮೊದಲು ಘೋಷಿತರಾಗಿದ್ದ ಸಿ.ಪಿ.ಐ ಎಂ.ನ ಮಾಣಿಕ್‌ದೇ ಮೊದಲಾದವರೆಲ್ಲಾ ಸೇರಿದಂತೆ ಅನೇಕ ಪಕ್ಷದ ಕಾರ್ಯಕರ್ತರ ಮನೆಯ ಮೇಲೆ ಧಾಳಿ ನಡೆಸಲಾಗಿದೆ. ಗಯಾಪುರ್ ಎಂಬಲ್ಲಿ ಸಿ.ಪಿ.ಐ.(ಎಂ) ಕಛೇರಿಯನ್ನು ಈ ಗೂಂಡಾಗಳು ಒಡೆದು ನೆಲಸಮ ಮಾಡಿದರು. ಪಕ್ಷದ ಕಛೇರಿಯಲ್ಲಿದ್ದ ಮಾರ್ಕ್ಸ್, ಎಂಗೆಲ್, ಲೆನಿನ್, ಸ್ಟಾಲಿನ್, ಮುಜಾಫರ್ ಅಹಮದ್, ಪ್ರಮೋದ್‌ದಾಸ್‌ಗುಪ್ತ ಮೊದಲಾದವರ ಚಿತ್ರಗಳನ್ನು ಒದ್ದು ಧ್ವಂಸ ಮಾಡಿದರು. ಇದಲ್ಲದೆ ಪಕ್ಷದ ಕಛೇರಿಯಲ್ಲಿದ್ದ ಫೈಲ್‌ಗಳು ಪತ್ರಗಳಿಗೆ ಬೆಂಕಿ ಹಾಕಲಾಗಿದೆ.

ಸೈದಾಪುರ್ ಎಂಬ ಜಾಗದಲ್ಲಿ ಮಹಾನಂದಬಡ್ಡೀರ್ ಎಂಬ ಪಕ್ಷದ ಕಾರ್ಯಕರ್ತರ ಮನೆಗೆ ನುಗ್ಗಿ ಅವರ ಪುತ್ರಿ ಪ್ರತಿಮಾಬಡ್ಡೀರ್‌ರವರನ್ನು ಅಪಹರಿಸಿದರು. ಈ ಪ್ರಯತ್ನದಲ್ಲಿ ವಿಫಲರಾದ ಮೇಲೆ ಮನೆಯ ಮೇಲೆ ಬಾಂಬ್ ಎಸೆದರು. ಇದರಿಂದ ಪ್ರತಿಮಾರವರಿಗೆ ತೀವ್ರ ಗಾಯಗಳಾಗಿ ಆಸ್ಪತ್ರೆಗೆ ದಾಖಲು ಮಾಡಬೇಕಾಯಿತು.

ಮನು ಎಂಬ ಕ್ಷೇತ್ರದಲ್ಲಿ ಸಿ.ಪಿ.ಐ.(ಎಂ) ಕಾರ್ಯಕರ್ತರ ಮನೆಗಳ ಮೇಲೆ ಬೆಂಕಿ ಹಾಕಲಾಯಿತು. ಉದಯಪುರ ಉಪ ವಿಭಾಗದ ಹಲವಾರು ಕಡೆ ದೊಡ್ಡ ಪ್ರಮಾಣದ ಧಾಳಿಗಳು ನಡೆದ ವರದಿಗಳು ಬರುತ್ತಿವೆ.

ಈ ಆಕ್ರಮಣದಿಂದ ಸಿ.ಪಿ.ಐ.(ಎಂ) ಕಾರ್ಯಕರ್ತರಾದ ಶಾಂತಿಸಹಾ, ಜ್ಯೋತಿಸಹಾ, ಸುಭಾಷ್‌ರಾಯ್, ಸಮರೇಂದ್ರರಾಯ್ ಮತ್ತು ರಾಜ್ಯ ಸರ್ಕಾರಿ ನೌಕರರಾದ ಶಿಶಿರ್ ಸಹಾ ಮೊದಲಾದವರು ಸೇರಿದಂತೆ ಹಲವಾರು ಜನರಿಗೆ ಗಾಯಗಳಾಗಿವೆ.

ಕಂಜರಾಪುರವೆಂಬ ಊರಿನಲ್ಲಿ ಸಿ ಆರ್.ಪಿ.ಯ ಸಹಾಯದಿಂದ ಸಿ.ಪಿ.ಐ.(ಎಂ) ಕಾರ್ಯಕರ್ತರ ಮನೆಗಳನ್ನು ಆಕ್ರಮಿಸಲಾಗಿದೆ. ಧರ್ಮನಗರದಲ್ಲಿ ಸಿ ಪಿ.ಐ. (ಎಂ) ಅಭಿಮಾನಿಗಳಾಗಿದ್ದ ಮುಸ್ಲಿಮರ ಮನೆಗಳಿಗೆ ನುಗ್ಗಿ ಕೂಡಲೇ ಜಾಗ ಖಾಲಿ ಮಾಡಿ, ಊರು ಬಿಟ್ಟು ತೊಲಗಿ ಎಂದು ಬೆದರಿಸಿದ್ದಾರೆ.

ಬಲವಾದ ಪ್ರತಿಭಟನೆಗೆ ಪಿ.ಬಿ. ಕರೆ

ಜನವರಿ 30 ರಂದು ಸಿ.ಪಿ ಐ. (ಎಂ)ನ ಪಾಲಿಟ್ ಬ್ಯೂರೋ ಕೇಂದ್ರ ಸರ್ಕಾರದ ಕ್ರಮವನ್ನು ಬಲವಾಗಿ ಖಂಡಿಸಿ ನೀಡಿದ ಹೇಳಿಕೆಯಲ್ಲಿ ತ್ರಿಪುರಾದ ರಾಜಕೀಯ ಹೋರಾಟದಲ್ಲಿ ಸಶಸ್ತ್ರ ಪಡೆಗಳನ್ನು ತೊಡಗಿಸುವ ಪ್ರಧಾನ ಮಂತ್ರಿಗಳ ಪ್ರಯತ್ನದ ವಿರುದ್ಧ ಪ್ರತಿಭಟನೆಯ ದನಿಯೆತ್ತಬೇಕೆಂದು ದೇಶದ ಎಲ್ಲಾ ಪ್ರಜಾಪ್ರಭುತ್ವವಾದೀ ಶಕ್ತಿಗಳಿಗೆ ಮನವಿ ಮಾಡಿಕೊಂಡಿದೆ. ಸತತ ಅಪಪ್ರಚಾರ, ಸಾಲ ಮೇಳ ಇತ್ಯಾದಿ ಪ್ರಯೋಜನವಿಲ್ಲವೆಂದು ಕಂಡಾಗ ಈ ಕ್ರಮಕೈಗೊಳ್ಳಲಾಗಿದೆ ಎಂದಿರುವ ಹೇಳಿಕೆ ಬೆಳಗ್ಗೆ ಪ್ರಧಾನ ಮಂತ್ರಿಗಳ ಪತ್ರಿಕಾ ಸಮ್ಮೇಳನ ಮಧ್ಯಪ್ರಸ್ತ ಈ ಘೋಷಣೆಗೆ ಎಡರಂಗದ ವಿರುದ್ಧ ಹಿಂಸಾಚಾರಕ್ಕೆ ನೀಡಿದ ಪ್ರೋತ್ಸಾಹವಲ್ಲದೆ ಬೇರೇನೂ ಅಲ್ಲ ಎಂಬುದು ಈ ಘೋಷಣೆಯಾದ ಒಂದೆರಡು ಗಂಟೆಯೊಳಗೇ ಎರಡು ಸಬ್–ಡಿವಿಜನ್‌ಗಳಲ್ಲಿ ಸುಮಾರು 15 ಸಿ.ಪಿ.ಐ.(ಎಂ) ಕಾರ್ಯಕರ್ತರ ಕೊಲೆ ತೋರಿಸಿಕೊಟ್ಟಿದೆ ಎಂದು ಹೇಳಿದೆ.

ಕಾಂಗ್ರೈ ಗಳಿಸಿದ ಬಹುಮತ

59 ಸ್ಥಾನಗಳಿಗೆ ನಡೆದ ತ್ರಿಪುರಾ ಚುನಾವಣೆಯಲ್ಲಿ 58 ಸ್ಥಾನಗಳ ಫಲಿತಾಂಶ ಬಂದ ಬಹಳ ಕಾಲದ ನಂತರ 59 ನೇ ಸ್ಥಾನದ ಫಲಿತಾಂಶ ಘೋಷಿತವಾಯಿತು. ಈ ಫಲಿತಾಂಶ ಕಾಂಗ್ರೈ ಟಿಯುಜೆಎಸ್ ರಂಗಕ್ಕೆ 31ನೆಯ ಸ್ಥಾನವನ್ನು ನೀಡಿತು. ಈ ಸ್ಥಾನವನ್ನು ಕಾಂಗ್ರೈ ಪಡೆದದ್ದು ಹೇಗೆ? ಮುಂದೆ ಓದಿ.

ಮತ ಎಣಿಕೆ ಮುಗಿದು ಸಿ.ಪಿ.ಐ. (ಎಂ) ಅಭ್ಯರ್ಥಿ ಮಾಣಿಕ್‌ದೇ 204 ಮತಗಳಿಂದ ಗೆದ್ದರೆಂದು ಘೋಷಿತವಾದ 7 ಗಂಟೆಗಳ ನಂತರ, ವಿಜೇತ ಅಭ್ಯರ್ಥಿ ವಿಜಯೋತ್ಸವದ ಮೆರವಣಿಗೆಯಲ್ಲಿರುವಾಗ ಇದ್ದಕ್ಕಿದ್ದಂತೆ ಒಂದು ತುರ್ತು ಸಂದೇಶ ಅವರನ್ನು ತಲುಪಿತು. ತಕ್ಷಣವೇ ಮತ ಎಣಿಕೆ ಕೇಂದ್ರಕ್ಕೆ ಬರಬೇಕು ಎಂದು ಈ ಸಂದೇಶ ತಿಳಿಸಿತ್ತು.

ಮತ ಎಣಿಕೆ ಕೇಂದ್ರಕ್ಕೆ ವಿಜೇತ ಅಭ್ಯರ್ಥಿ ಬಂದ ಕೂಡಲೇ ಚುನಾವಣಾಧಿಕಾರಿಯ ಪ್ರಶ್ನೆ : ನಿಮ್ಮ ಪ್ರತಿನಿಧಿಗಳೆಲ್ಲಿ ? ಮಾಣಿಕ್‌ದೇಯವರಿಗೆ ಆಚ್ಚರಿ, ಇದೇನಿದು ಎಂದು. ಪ್ರತಿನಿಧಿಗಳನ್ನು ಕರೆತರಲು ನಿಮ್ಮ ಸಂದೇಶದಲ್ಲಿ ತಿಳಿಸಿರಲಿಲ್ಲ ಎಂದು ಅವರು ಉತ್ತರಿಸಿದರು. ಸರಿಯಾಗಿ ಇದೇ ಸಮಯಕ್ಕೆ ತ್ರಿಪುರಾ ಕಾಂಗ್ರೈ ಅಧ್ಯಕ್ಷ ಸುಧೀರ್ ಮುಜುಂದಾರ್‌ರವರ ನೇತೃತ್ವದಲ್ಲಿ ಸುಮಾರು 500ಕ್ಕೂ ಹೆಚ್ಚು ಗೂಂಡಾಗಳು ಮತ ಎಣಿಕೆ ಕೇಂದ್ರಕ್ಕೆ ನುಗ್ಗಿ ಕಾಂಗ್ರೈ ಅಭ್ಯರ್ಥಿ ವಿಜೇತನಾಗಿದಾನೆಂದು ಘೋಷಿಸಲು ಬೆದರಿಸಿದರು. ಆದಕ್ಕೆ ಚುನಾವಣಾಧಿಕಾರಿ ಒಪ್ಪಲಿಲ್ಲ. ತಕ್ಷಣವೇ ಅವರ ಮೇಲೆ ಹಲ್ಲೆ ಆರಂಭವಾಯಿತು. ಚುನಾವಣಾಧಿಕಾರಿ, ಹಾಗೂ ವಿಜೇತ ಸಿ.ಪಿ.ಐ. (ಎಂ) ಅಭ್ಯರ್ಥಿ ಮಾಣಿಕ್‌ದೇಯವರಿಗೆ ತೀವ್ರ ಗಾಯಗಳಾಯಿತು. ಎಣಿಕೆಯಾದ ಮತಗಳ ಕಟ್ಟುಗಳಲ್ಲಿ ಸಿ.ಪಿ.ಐ. (ಎಂ) ಅಭ್ಯರ್ಥಿಯ ಮತಗಳ ಕಟ್ಟುಗಳನ್ನು ಬಿಸಾಡಿ ಮತ್ತೆ ಮತ ಎಣಿಕೆ ನಡೆಸಿದರು. ಸಿ.ಪಿ.ಐ. (ಎಂ) ಅಭ್ಯರ್ಥಿಗೆ ಬಿದ್ದ ಹೆಚ್ಚುವರಿ ಮತಗಳನ್ನು ಕುಲಗೆಟ್ಟ ಮತಗಳು ಎಂದು ಘೋಷಿಸಲಾಯಿತು. ಸಿ.ಪಿ.ಐ.(ಎಂ) ಅಭ್ಯರ್ಥಿಗೆ ಮಾತನಾಡಲು ಕೂಡ ಅವಕಾಶ ನೀಡಲಿಲ್ಲ. ಇಷ್ಟೆಲ್ಲಾ ಆದ ಮೇಲೆ ಕಾಂಗ್ರೈ ಅಭ್ಯರ್ಥಿ 102 ಮತಗಳಿಂದ ಗೆದಿದ್ದಾನೆಂದು ಘೋಷಿಸುವ ಪತ್ರಕ್ಕೆ ಸಹಿ ಪಡೆಯಲಾಯಿತು.

ಇಂತಹ ನಾಚಿಕೆ ಗೆಟ್ಟ ಕೆಲಸ ಏಕೆ? ಕೇವಲ ಒಂದು ಮತದಿಂದ ಮುಂದೆ ಇದ್ದ ಕಾಂಗ್ರೈ ರಂಗ ವಿಧಾನ ಸಭಾಧ್ಯಕ್ಷರ ಕ್ಯಾಸ್ಟಿಂಗ್ ವೋಟಿನಿಂದಲೇ ಯಾವಾಗಲೂ ಸರ್ಕಾರ ನಡೆಸಬೇಕಾದ ಅನಿವಾರ್ಯತೆಯನ್ನು ತಪ್ಪಿಸಲು ಈ ಕೆಲಸ ಮಾಡಿದರು. ಮುಂಬರುವ ದಿನಗಳಲ್ಲಿ ಸಿ.ಪಿ.ಐ (ಎಂ) ಕಾರ್ಯಕರ್ತರು ಎದುರಿಸಬೇಕಾದ್ದೇನು ಎಂಬುದಕ್ಕೆ ಇದು ಮುನ್ಸೂಚನೆಯಾಗಿದೆ.

ತ್ರಿಪುರಾ ಚುನಾವಣೆಗಳ ಕುರಿತು ಪಿ. ಡಿ.

ದೇಶದ ಐಕ್ಯತೆ, ಪ್ರಜಾಪ್ರಭುತ್ವಕ್ಕೆ ಮಾರಕವಾದ ಚುನಾವಣಾ ಸಮಯ ಸಾಧಕತೆ

[ತ್ರಿಪುರಾದಲ್ಲಿ ಚುನಾವಣಾ ದಿನದ ಸ್ವಲ್ಪವೇ ಮೊದಲು ಸಂಪೂರ್ಣ ರಾಜ್ಯವನ್ನು ಗಲಭೆ ಪೀಡಿತ ಪ್ರದೇಶವೆಂದು ಘೋಷಿಸಿ ಸೇನೆ ಕಳುಹಿಸಿದ ಬಗ್ಗೆ "ಪೀಪಲ್ಸ್ ಡೆಮಾಕ್ರಸಿ" ಯ ಸಂಪಾದಕೀಯವನ್ನು ಇಲ್ಲಿ ಕೊಡುತ್ತಿದ್ದೇವೆ. ಚುನಾವಣಾ ಫಲಿತಾಂಶ ಬರುವ ಮೊದಲೇ ಇದನ್ನು ಬರೆಯಲಾಗಿತ್ತು ಎಂಬುದು ಇಲ್ಲಿ ಗಮನಾರ್ಹ]

ಸಮಸ್ತ ತ್ರಿಪುರಾ ರಾಜ್ಯವನ್ನು ಗಲಭೆ ಪೀಡಿತ ಪ್ರದೇಶವೆಂದು ಘೋಷಿಸುವ ಪ್ರಕಟನೆಯನ್ನು ಪತ್ರಿಕೆಗಳು ಹಾಗೂ ಜಾತ್ಯಾತೀತ ವಿರೋಧ ಪಕ್ಷಗಳು ಒಮ್ಮತದಿಂದ ಖಂಡಿಸಿವೆ. ಕಾಂಗ್ರೆಸ್ (ಐ) ನ ಮುಸುಕಾಗುತ್ತಿದ್ದ ಅದೃಷ್ಟವನ್ನು ಶುಭ್ರಗೊಳಿಸಿ, ಚುನಾವಣೆಗಳ ಮೇಲೆ ಪ್ರಭಾವ ಬೀರಲು ಈ ತಂತ್ರ ಹೂಡಲಾಗಿದೆಯೆಂದು ಎಲ್ಲರಿಗೂ ಅರ್ಥವಾಗಿದೆ. ವಿರೋಧ ಪಕ್ಷಗಳಲ್ಲಿ ಕೇವಲ ಬಿಜೆಪಿ ಮಾತ್ರವೇ ಕೇಂದ್ರ ಸರ್ಕಾರದ ಕ್ರಮವನ್ನು ಸ್ವಾಗತಿಸಿರುವುದು. ಆಳುವ ಪಕ್ಷದ ಅನೀತಿಯುತ ಕೆಲಸಗಳು ಹಾಗೂ 1972ರಲ್ಲಿ ಪಶ್ಚಿಮ ಬಂಗಾಳದ ಅನುಭವದ ಹಿನ್ನೆಲೆಯಲ್ಲಿ ಪರಿಶೀಲಿಸಿದಾಗ ಚುನಾವಣಾ ಫಲಿತಾಂಶಗಳನ್ನೇ ತಲೆಕೆಳಗು ಮಾಡುವ ಪ್ರಯತ್ನ ನಡೆದರೆ ಆಶ್ಚರ್ಯವೇನಿಲ್ಲ.

ಚುನಾವಣಾ ಪ್ರಕ್ರಿಯೆ ಸಾಗಿರುವಾಗ ಸೇನೆಯನ್ನು ಮಧ್ಯ ಪ್ರವೇಶಿಸುವಂತೆ ಹೇಳಿರುವುದು ರಕ್ಷಣಾ ಪಡೆಗಳನ್ನು ಆಳುವ ಪಕ್ಷದ ಚುನಾವಣಾ ಲಾಭಕ್ಕಾಗಿ ದುರುಪಯೋಗಪಡಿಸಿಕೊಂಡಂತಲ್ಲದೆ ಬೇರೇನೂ ಅಲ್ಲ. ಸೇನೆಯನ್ನು ವಿದೇಶೀ ಆಕ್ರಮಣದಿಂದ ಜನತೆಯನ್ನು ರಕ್ಷಿಸುವ ರಾಷ್ಟ್ರೀಯ ಪಡೆಯ ಬದಲು ಆಳುವ ಪಕ್ಷದ ಪಕ್ಷಪಾತೀ ಅಸ್ತ್ರದಂತೆ ಮಾಡಲಾಗಿದೆ. ಅಧಿಕಾರದ ಈ ದುರುಪಯೋಗ ಕೇಂದ್ರ ಸರ್ಕಾರ ಸಂವಿಧಾನಕ್ಕೆ ಪ್ರಜಾಪ್ರಭುತ್ವಕ್ಕೆ ಒಡ್ಡಿರುವ ಬಹಿರಂಗ ಬೆದರಿಕೆಯಾಗಿದೆ. ಇದರರ್ಥ ಪ್ರಜಾಪ್ರಭುತ್ವ ಮತ್ತು ಸಂವಿಧಾನಾತ್ಮಕ ಪ್ರಕ್ರಿಯೆಗಳು ಆಳುವ ಪಕ್ಷ ಅಥವಾ ಸರ್ಕಾರದ ಹಿತಾಸಕ್ತಿಗೆ ವಿರುದ್ಧ ಹೋಗುವಂತೆ ಆದಾಗಲೆಲ್ಲಾ ಈ ರೀತಿಯ ಮಧ್ಯ ಪ್ರವೇಶ ನಡೆಸಿ ಬುಡಮೇಲು ಮಾಡಬಹುದು ಎಂದೇ ಆಗುತ್ತದೆ. ಚುನಾವಣಾ ಪ್ರಕ್ರಿಯೆಗಳಲ್ಲಿ ಈ ರೀತಿಯ ವರ್ತನೆ ಝಿಯಾಗಳು ಹಾಗೂ ಎರ್ಷಾದ್‌ಗಳಿಗೆ ಅತ್ಯಂತ ಪ್ರಿಯವಾದ ಸರ್ವಾಧಿಕಾರೀ ವಿಧಾನಗಳಷ್ಟೆ. ಇದು ಪ್ರಜಾಪ್ರಭುತ್ವದ ಮೇಲೊಂದು ಕ್ರಿಮಿನಲ್ ಹಲ್ಲೆ. ಸರ್ವಾಧಿಕಾರವನ್ನು ವಿರೋಧಿಸುವ ರಾಜಕೀಯ ಪಕ್ಷಗಳೆಲ್ಲಾ ಇದನ್ನು ಖಂಡಿಸಲೇಬೇಕು. ಟಿ.ಎನ್.ವಿ. ಅಪಾಯವನ್ನು ತಡೆಯುವಲ್ಲಿ ಎಡರಂಗ ಸರ್ಕಾರ ವಿಫಲವಾದುದರಿಂದಷ್ಟೇ ಸೇನೆಯನ್ನು ಕರೆಸಬೇಕಾಯಿತು ಎಂದು ರಾಜೀವ್ ಗಾಂಧಿ ಹಾಗೂ ಅವರ ಸರ್ಕಾರ ಅಪಪ್ರಚಾರ ಮಾಡುತ್ತಿದ್ದಾರೆ. ಆದರೆ ಸತ್ಯಾಂಶ ಬೇರೆಯೇ ಆಗಿದೆ. ಟಿ.ಎನ್.ವಿ. ಕೊಲೆಗಳು ಹೆಚ್ಚಿದ್ದೆಬುದು ನಿಜ. ಆದರೆ ಎಡರಂಗ ಸರ್ಕಾರ ಇದನ್ನು ಗಮನಿಸಿತ್ತು. ಆದರಿಂದಾಗಿಯೇ ಕೇಂದ್ರ ಗೃಹ ಮಂತ್ರಿ ಭೂಟಾ ಸಿಂಗ್ ಹಾಗೂ ಮುಖ್ಯ ಮಂತ್ರಿಗಳ ನಡುವೆ ಒಪ್ಪಂದ ನಡೆದು ರಾಜ್ಯದ ಸಣ್ಣ ಭಾಗದಲ್ಲಿ ಗಲಭೆಪೀಡಿತ ಪ್ರದೇಶ ಕಾನೂನು ಜಾರಿಗೊಳಿಸಲಾಯಿತು. ಆದರೆ ಇಷ್ಟರಿಂದಲೇ ಕಾಂಗ್ರೆಸ್ (ಐ) ನ ಚುನಾವಣಾ ಬೇಳೆ ಬೇಯಲು ಸಾಧ್ಯವಿರಲಿಲ್ಲ. ಆದಕ್ಕೆ ರಾಜ್ಯಾದ್ಯಂತ ಭಯದ ವಾತಾವರಣ ಕಲ್ಪಿಸುವ ಅಗತ್ಯವಿತ್ತು.

ಸಮಾಜ ಘಾತುಕ ವ್ಯಕ್ತಿಗಳಿಗೆ ಪ್ರೋತ್ಸಾಹ ನೀಡುತ್ತಾ ಸ್ವತಃ ಕಾಂಗ್ರೆಸ್ (ಐ) ಹಿಂಬಾಲಕರೇ ಕಾನೂನು ಬಾಹಿರ ಕೃತ್ಯಗಳನ್ನು ಕೆಲವು ವಾರಗಳಲ್ಲಿ ಹೆಚ್ಚಿಸಿ ಕಾನೂನು ವ್ಯವಸ್ಥೆ ಕೆಟ್ಟಿದೆಯೆಂದು ಬೊಬ್ಬೆ ಹಾಕುತ್ತಾ ಬರುತ್ತಿದ್ದಾರೆ. ಎಡರಂಗ ಸರ್ಕಾರವನ್ನು ವಜಾ ಮಾಡಿ ರಾಷ್ಟ್ರಪತಿ ಆಳ್ವಿಕೆ ಹೇರಬೇಕೆಂದು ಚುನಾವಣೆಗಳ ಮೊದಲೇ ಅವರು ಒತ್ತಾಯ ವೆಬ್ಬಿಸಿದ್ದರು.

ಆದರೂ ಎಡರಂಗ ಸರ್ಕಾರವನ್ನು ವಜಾ ಮಾಡುವುದು ಕೇಂದ್ರ ಸರ್ಕಾರಕ್ಕೆ ಕಷ್ಟಸಾಧ್ಯವಾಗಿತ್ತು. ರಾಜ್ಯದಲ್ಲಿ ಕಾಂಗ್ರೆಸ್ (ಐ) ಗೆ ನೇರವಾಗಲು ಬೇರೆ ದಾರಿ ಹುಡುಕಬೇಕಾಗಿತ್ತು. ಗಡಿಯಾಚೆಯಿಂದ ಟಿ ಎನ್.ವಿ. ಧಾಳಿಗಳು ಈ ಸಂದರ್ಭದಲ್ಲಿ ಅವರಿಗೆ ಬಹಳ ಪ್ರಯೋಜನಕಾರಿಯೆನಿಸಿತು. ಅಮಾಯಕ ಜನತೆಯ ರಕ್ಷಣೆಯ ಹೆಸರಿನಲ್ಲಿ ಚಪಲ ಬುದ್ಧಿಯ ಪ್ರಧಾನ ಮಂತ್ರಿ ಪ್ರಜಾಪ್ರಭುತ್ವದ ವಿರುದ್ಧ ಈ ಅಪರಾಧ ಎಸಗುವಂತೆ ಮಾಡುವುದು ಬಹಳ ಸುಲಭವಾಗಿತ್ತು. ಚುನಾವಣಾ ಪ್ರಕ್ರಿಯೆಯನ್ನು ಕಲಬೆರಕೆಗೊಳಿಸಲು, ಬುಡಮೇಲು ಮಾಡಲು ಟಿ.ಎನ್.ವಿ. ಒಂದು ರಾಜಕೀಯ ನೆಪವಾಯಿತು.

ಟಿ. ಎನ್. ವಿ. ಗೆ ಕೂಡಾ ಕಾಂಗ್ರೆಸ್ (ಐ) ಸ್ಪಷ್ಟ ಚುನಾವಣಾ ತೀರ್ಪಿನಲ್ಲಿ ಆಸಕ್ತಿಯಿಲ್ಲ. ಆದ್ದರಿಂದಲೇ ಚುನಾವಣೆಯನ್ನು ಬುಡಮೇಲು ಮಾಡಲು ಇದು ತನ್ನ ಚಟುವಟಿಕೆ ತೀವ್ರಗೊಳಿಸಿತು. ಅದರ ಕೊಲೆ ಸುಲಿಗೆಗಳಲ್ಲಿ ಇತ್ತೀಚೆಗೆ ವಿಪರೀತ ಹೆಚ್ಚಳ ಈ ಯೋಜನೆಯ ಒಂದು ಅಂಗವಾಗಿತ್ತು. ಗಡಿಯನ್ನು ಕಾಯುವ ಪಡೆಗಳ ಕೆಲವು ತುಕಡಿಗಳೇ ಅವರಿಗೆ ಸಹಾನುಭೂತಿ ತೋರಿಸಿದಂತೆ ಕಾಣುತ್ತಿದೆ. ಒಬ್ಬ ಗಡಿರಕ್ಷಣಾ ಪಡೆ ಅಧಿಕಾರಿ ಟಿ.ಎನ್.ವಿ.ಯ ದೂತನಂತೆ ವರ್ತಿಸಿ ಮುಖ್ಯ ಮಂತ್ರಿಗಳನ್ನೇ ಚುನಾವಣಾ ಸಭೆ ನಡೆಸದಂತೆ ಹೇಳಿದ. ಕೇಂದ್ರ ಸರ್ಕಾರದ ಮನಸ್ಸು ಎತ್ತ ಸಾಗುತ್ತಿದೆ ಎಂಬುದನ್ನು ಕೆಲವು ಅಧಿಕಾರಿಗಳು ಆಗಲೇ ಮನಗಂಡಿದ್ದರು.

ರಾಜೀವ್ ಗಾಂಧಿಯವರ ಬಗ್ಗೆ ಅಪನಂಬಿಕೆ ಎಷ್ಟಿದೆಯೆಂದರೆ ಗಲಭೆ ಪೀಡಿತ ಪ್ರದೇಶವೆಂಬ ಘೋಷಣೆ ದೇಶದ ರಕ್ಷಣೆಗಾಗಿ ಎಂಬ ಮಾತನ್ನು ಯಾರೂ ನಂಬುತ್ತಿಲ್ಲ. ಯಾಕೆಂದರೆ ತಿಂಗಳಾನು ಗಟ್ಟಲೆಯಿಂದ ತ್ರಿಪುರಾ ಮಂತ್ರಿ ಮಂಡಲ ಸಹಾಯ ಕೇಳುತ್ತಿದ್ದರೂ ಕೇಂದ್ರ ಸರ್ಕಾರ ಕೊಟ್ಟಿರಲಿಲ್ಲ.

ಕಾಂಗ್ರೆಸ್ (ಐ) ಮುಖಂಡರು ಎಡರಂಗ ಮಂತ್ರಿ ಮಂಡಲಗಳ ವಿರುದ್ಧ ಶಸ್ತ್ರ ಎತ್ತಬೇಕೆಂದು ಬಹಿರಂಗ ಕರೆ ನೀಡುತ್ತಿರುವುದನ್ನು ಎಲ್ಲರೂ ಗಮನಿಸಬೇಕು. ಉಪಯೋಗಿಸಬಲ್ಲವರಿಗೆಲ್ಲಾ ಸ್ಟೆನ್ ಗನ್ ಬೇಕಾದರೂ ಪೂರೈಸಬಲ್ಲೆ ಎಂದು ಪಶ್ಚಿಮ ಬಂಗಾಳದ ಪಂಚಾಯತ್ ಚುನಾವಣೆ ಸಂದರ್ಭದಲ್ಲಿ ಘನೀ ಖಾನ್ ಚೌಧುರಿಯ ಘೋಷಣೆಯನ್ನು ರಾಜೀವ್ ಗಾಂಧಿಯೂ ಸೇರಿದಂತೆ ಯಾವ ಕಾಂಗ್ರೆಸ್ (ಐ) ಮುಖಂಡನೂ ಖಂಡಿಸಿಲ್ಲ. ಬದಲಿಗೆ ಇದೇ ಸಂದೇಶವನ್ನು ಅವರೆಲ್ಲಾ ಗುಪ್ತವಾಗಿ ತ್ರಿಪುರಾಕ್ಕೂ ಕೊಂಡೊಯ್ದಿದ್ದಾರೆ. ತ್ರಿಪುರಾ ಚುನಾವಣಾ ಸಿದ್ಧತೆಯಲ್ಲಿ ಶಸ್ತ್ರ, ಬಾಂಬ್, ಹಿಂಸಾಚಾರ ಇತ್ಯಾದಿ ಎಲ್ಲದರ ಬಗ್ಗೆಯೂ ಚರ್ಚೆ ನಡೆದಿದೆ. ಗಲಭೆ ಪೀಡಿತ ಪ್ರದೇಶದ ಘೋಷಣೆ ಮಾಡಿರುವುದು ಈ ಹಿನ್ನೆಲೆಯಲ್ಲಿ. ತನ್ನ ಈ ಅನೀತಿಯುತ ಕೃತ್ಯಗಳ ಮೂಲಕ ರಾಜೀವ್‌ಗಾಂಧಿ ಪ್ರಜಾಪ್ರಭುತ್ವದ ವಿರುದ್ಧ ಅಪರಾಧ ಎಸಗುತ್ತಿದ್ದಾರೆ. ಮಾತ್ರವಲ್ಲ, ದೇಶದ ಐಕ್ಯತೆಯ ಪ್ರಮುಖ ಪ್ರಶ್ನೆಯ ಮೇಲೂ ಪ್ರಹಾರ ನಡೆಸಿದ್ದಾರೆ. ಈಶಾನ್ಯ ಭಾಗದಲ್ಲಿ ಬುಡಕಟ್ಟು ಜನರು ಹಾಗೂ ಇತರರ ನಡುವೆ ದೃಢ ಐಕ್ಯತೆಯಿರುವ ಏಕಮಾತ್ರ ರಾಜ್ಯ ತ್ರಿಪುರಾ ಎಂಬುದು ಎಲ್ಲರಿಗೂ ಗೊತ್ತಿರಬೇಕು. ಸಿ.ಪಿ.ಐ. (ಎಂ) ಮಂತ್ರಿ ಮಂಡಲ ಅನುಸರಿಸಿದ ಧೋರಣೆಯಿಂದ ಮಾತ್ರವೇ ಇದು ಸಾಧ್ಯವಾಗಿದೆ. ಇತರೆಡೆಗಳಂತೆ ಬುಡಕಟ್ಟು ಜನಾಂಗಗಳು ಇಲ್ಲಿ ಪ್ರತ್ಯೇಕತೆಯ ಪ್ರಶ್ನೆ ಎತ್ತಿಲ್ಲ. ಈ ಐಕ್ಯತೆಯನ್ನು ಕಾಪಾಡಿಕೊಳ್ಳುವ ಕಾರಣಕ್ಕಾಗಿಯೇ ಇಡೀ ತ್ರಿಪುರಾವನ್ನು ಗಲಭೆ ಪೀಡಿತ ಪ್ರದೇಶ ಕಾನೂನಿಗೊಳಪಡಿಸಲು ಎಡರಂಗ ಬಯಸುತ್ತಿರಲಿಲ್ಲ. ಯಾಕೆಂದರೆ ಹಾಗೇ ಮಾಡಿದ್ದರೆ ಅನಿವಾರ್ಯವಾಗಿಯೇ ಆರಂಭವಾಗುತ್ತಿದ್ದ ಕಿರುಕುಳ ಬುಡಕಟ್ಟು ಜನತೆಯಲ್ಲಿ ಕಹಿ ಭಾವನೆ ತುಂಬಿ ಇತರರನ್ನೆಲ್ಲಾ ಹೊಡೆದೋಡಿಸಬೇಕೆಂಬ ಟಿ.ಎನ್.ವಿ. ಪ್ರಚಾರಕ್ಕೆ ತುಪ್ಪ ಸುರಿದಂತಾಗುತ್ತಿತ್ತು.

ಸಶಸ್ತ್ರ ಸೇವೆಯ ನಿರ್ದೇಶನ ಮಾಡುವವರು ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಭಾರತೀಯ ಐಕ್ಯತೆ ಮತ್ತು ಪ್ರಜಾಪ್ರಭುತ್ವದ ಬಗ್ಗೆ ಬುಡಕಟ್ಟು ಜನತೆಯಲ್ಲಿ ದೃಢವಿಶ್ವಾಸ ಮೂಡುವಂತೆ ವರ್ತಿಸಬೇಕೆಂದು ಸೂಕ್ತ ಮಾರ್ಗದರ್ಶನ ನೀಡದಿದ್ದರೆ ರಾಜೀವ್ ಗಾಂಧಿಯವರ ಈ ಚುನಾವಣಾ ಸಮಯ ಸಾಧಕತೆ ಮತ್ತು ಪ್ರಜಾಪ್ರಭುತ್ವದ ಬಗ್ಗೆ ತೋರಿದ ತೋರಿದ ತಾತ್ಸಾರ ಈ ಅಪಾಯಕಾರೀ ಪರಿಣಾಮ ಬೀರಬಹುದು.

ಘೋಷಣೆಯ ಜ್ಯಾರಿಯಾದ ಕೂಡಲೇ ಬಂದ ವರದಿಗಳ ಪ್ರಕಾರ ಈಗಾಗಲೇ ಬುಡಕಟ್ಟು ಮತದಾರರಿಗೆ ಕಿರುಕುಳ, ಭಯೋತ್ಪಾದನೆ ಕೃತ್ಯಗಳು ಆರಂಭವಾಗಿಯೇ ಬಿಟ್ಟಿವೆ. ಕಾಂಗ್ರೆಸ್ (ಐ) ಮುಖಂಡ ಚಿಂತಾಮಣಿ ಪಾಣಿಗ್ರಾಹಿ ಸಶಸ್ತ್ರ ಪಡೆಗಳ ಕಾರ್ಯಾಚರಣೆಗಳನ್ನು ನಿರ್ದೇಶಿಸುತ್ತಿದ್ದು ಸಂದಿಗ್ಧ ವಾತಾವರಣ ಸೃಷ್ಟಿಯಾಗಿದೆ. ಮತ್ತು ತನ್ಮೂಲಕ ಸಾಚಾ ಮತದಾರರನ್ನು ಬೆದರಿಸಲು ಸಮಾಜ ಘಾತುಕ ವ್ಯಕ್ತಿಗಳಿಗೆ ಪ್ರೋತ್ಸಾಹ ದೊರೆಯುತ್ತಿದೆ. ಎಲ್ಲಾ ದೇಶಪ್ರೇಮೀ ಶಕ್ತಿಗಳು, ಪ್ರಜಾಪ್ರಭುತ್ವದ ರಕ್ಷಕರು ಕೇಂದ್ರ ಸರ್ಕಾರ ಕೈಗೊಂಡಿರುವ ಕ್ರಮಗಳನ್ನು ಖಂಡಿಸಿ ಮುಕ್ತ ಹಾಗೂ ನ್ಯಾಯಪೂರ್ಣ ಚುನಾವಣೆ ನಡೆದರೆ ಕಾಂಗ್ರೆಸ್ (ಐ) ಪೂರ್ಣ ಪರಾಭವ ಹೊಂದಿ ಎಡರಂಗ ಇನ್ನಷ್ಟು ಬಹುಮತದಿಂದ ಆರಿಸಿ ಬಂದು ತ್ರಿಪುರಾದಲ್ಲಿ ಪ್ರಜಾಪ್ರಭುತ್ವ ಮತ್ತು ಐಕ್ಯತೆ ಮತ್ತಷ್ಟು ಬಲಗೊಳ್ಳುವುದರಲ್ಲಿ ಸಂಶಯವಿಲ್ಲ.

ವಿರೋಧ ಪಕ್ಷಗಳ ಜಂಟಿ ಹೇಳಿಕೆ

ಕಾಂಗ್ರೈನ ಅಪಾಯಕಾರಿ ಆಟ

ಪ್ರಮುಖ ವಿರೋಧ ಪಕ್ಷಗಳ ಪ್ರತಿನಿಧಿಗಳು ತ್ರಿಪುರಾ ಚುನಾವಣೆಯ ಹೊತ್ತಿಗೆ ಕಾಂಗ್ರೈನ ಪ್ರಜಾಪ್ರಭುತ್ವ ವಿರೋಧಿ ಪಿತೂರಿಯನ್ನು ಖಂಡಿಸಿ ಹೇಳಿಕೆ ನೀಡಿದರು. ಅದರ ಸಾರಾಂಶ ಈ ಕೆಳಗಿನಂತಿದೆ :-

ತ್ರಿಪುರಾ ಚುನಾವಣೆಯಲ್ಲಿ ಪರಾಭವದ ಭಯದಿಂದ ಚುನಾವಣಾ ಪ್ರಚಾರದಲ್ಲಿ ಭಾಗವಹಿಸುತ್ತಿರುವ ಕಾಂಗ್ರೈ ನಾಯಕರು-ರಾಜ್ಯ ಸರ್ಕಾರ ಅಧಿಕಾರಿಗಳು, ನೌಕರರು ಮತ್ತು ಪೋಲೀಸ್ ಅಧಿಕಾರಿಗಳ ವಿರುದ್ಧ-ಹಿಂಸಾಚಾರ ನಡೆಸುವಂತೆ ತಮ್ಮ ಹಿಂಬಾಲಕರನ್ನು ಪ್ರಚೋದಿಸುತ್ತಿದ್ದಾರೆ. ಜನವರಿ 19ರಂದು ಕೈಲಾಶಹರ್ ಮತ್ತು ಉದಯಪುರ ಜಿಲ್ಲಾ ಕೇಂದ್ರಗಳಲ್ಲಿ ಕುಖ್ಯಾತ ಗೂಂಡಾಗಳು ಕಾಂಗ್ರೈ ಬ್ಯಾನರುಗಳನ್ನು ಹಿಡಿದುಕೊಂಡು ಪೋಲೀಸ್ ಸ್ಟೇಶನುಗಳಿಗೆ ಬಲಾತ್ಕಾರವಾಗಿ ನುಗ್ಗಿದರು. ಉದಯಪುರದಲ್ಲಿ ಪೋಲೀಸ್ ಸ್ಟೇಶನನ್ನು ಘೆರಾವೋ ಮಾಡಿ ಪೋಲೀಸ್ ಸೂಪರಿಂಡೆಂಟ್ ಮತ್ತು ಜಿಲ್ಲಾಮ್ಯಾಜಿಸ್ಟ್ರೇಟ್ ಜತೆ ಅಸಭ್ಯವಾಗಿ ವರ್ತಿಸಿದ್ದಾರೆ. ಇದೇ ರೀತಿ ಚಿತ್ತಗಾಂಗ್-ತ್ರಿಪುರಾ ಗಡಿ ಪ್ರದೇಶಗಳಲ್ಲಿ ಟಿ.ಎನ್.ವಿ. ಉಗ್ರಗಾಮಿಗಳ ಬೆಂಬಲ ತೆಗೆದುಕೊಂಡಿದ್ದಾರೆ.

ಜನವರಿ 23ರಂದು ತ್ರಿಪುರಾಕ್ಕೆ ಭೇಟಿ ನೀಡಿದ ಕೇಂದ್ರ ಗೃಹ ರಾಜ್ಯ ಸಚಿವ ಪಿ. ಚಿದಂಬರಂ ಕಾಂಗ್ರೈನ ಈ ಕೃತ್ಯವನ್ನು ಖಂಡಿಸುವ ಬದಲು ಚುನಾವಣೆಯ ಸಮಯದಲ್ಲಿ ಕಾನೂನು ಮತ್ತು ವ್ಯವಸ್ಥೆಯ ಪಾಲನೆಗೆ ನಿಯುಕ್ತವಾಗಿರುವ ತ್ರಿಪುರಾ ರಾಜ್ಯ ರೈಫಲ್ಸ್ ಪಡೆಗಳನ್ನು ಹಿಂತೆಗೆದುಕೊಳ್ಳಬೇಕೆಂದು ಡಿ.ಜಿ.ಪಿ. ಮತ್ತು ಮುಖ್ಯ ಕಾರ್ಯದರ್ಶಿಗಳಿಗೆ ಆದೇಶವಿತ್ತಿದ್ದಾರೆ. ಕಾನೂನು ಮತ್ತು ವ್ಯವಸ್ಥೆಯ ಪಾಲನೆಯನ್ನು ಅರೆ-ಮಿಲಿಟರಿ ಪಡೆಗಳು ವಹಿಸಬೇಕೆಂದು ಅವರ ಇಚ್ಛೆ.

ಇಷ್ಟೆಲ್ಲಾ ಪ್ರಚೋದನೆ ಇದ್ದಾಗ್ಯೂ ತ್ರಿಪುರಾ ಶಾಂತಿಯುತವಾಗಿರುವುದು, ಜನತೆಯ ರಾಜಕೀಯ ಪ್ರಜ್ಞೆ ಮಟ್ಟವನ್ನು ತೋರಿಸುತ್ತದೆ.

ಹಿಂಸೆಗೆ ಪ್ರಚೋದನೆ ನೀಡುವ ಕೇಂದ್ರ ಮತ್ತು ರಾಜ್ಯ ಕಾಂಗ್ರೈನ ನಾಯಕರ ಬೇಜವಾಬ್ದಾರಿ ನೀತಿಯನ್ನು ನಾವು ಖಂಡತುಂಡವಾಗಿ ಖಂಡಿಸುತ್ತೇವೆ. ಉಗ್ರಗಾಮಿ ಹಿಂಸಾಚಾರದಿಂದ ನರಳುತ್ತಿರುವ ಈ ಚಿಕ್ಕ ಗಡಿರಾಜ್ಯವೊಂದರಲ್ಲಿ ಕಾಂಗ್ರೈನ ಈ ಅಪಾಯಕಾರಿ ಆಟದ ವಿರುದ್ಧ ಎಲ್ಲಾ ಪ್ರಜಾಸತ್ತಾತ್ಮಕ ಶಕ್ತಿಗಳು ಪ್ರತಿಭಟಿಸಬೇಕು. ಈ ಧೋರಣೆಯ ಅಪಾಯವನ್ನು ಕಾಂಗ್ರೈ ತಿಳಿದುಕೊಂಡು ತ್ರಿಪುರಾದಲ್ಲಿ ಶಾಂತಿಯುತ ಚುನಾವಣೆಗೆ ಅನುವು ಮಾಡಿಕೊಡಬೇಕು."

ಈ ಹೇಳಿಕೆಗೆ ಇ.ಎಂ.ಎಸ್, ರಾಜೇಶ್ವರರಾವ್, ಲೋಕದಳ (ಬಿ) ಅಧ್ಯಕ್ಷ ಬಹುಗುಣ, ಜನತಾ ಪಕ್ಷದ ಯಶವಂತ ಸಿನ್ಹಾ, ತೆಲುಗು ದೇಶಂನ ಪ್ರೊ. ಲಕ್ಷ್ಮಣ, ಆರ್.ಎಸ್.ಪಿ.ಯ ತ್ರಿದಿಬ್ ಚೌಧುರಿ, ಫಾರ್ವರ್ಡ್ ಬ್ಲಾಕ್‌ನ ಡಿ.ಡಿ.ಶಾಸ್ತ್ರಿ ಹಾಗೂ ಕಾಂಗ್ರೆಸ್ (ಎಸ್) ನ ಕಿಶೋರ್ ಚಂದ್ರ ಸಹಿ ಹಾಕಿದ್ದಾರೆ.

ಎ. ಐ. ಎಲ್. ಯು. 2ನೇ ರಾಜ್ಯ ಸಮ್ಮೇಳನ

ಜನವರಿ 9 ರಂದು ಅಖಿಲ ಭಾರತ ವಕೀಲರ ಸಂಘ (ಎ.ಐ.ಎಲ್.ಯು.) 2ನೇ ಕರ್ನಾಟಕ ರಾಜ್ಯ ಸಮ್ಮೇಳನ ಬೆಂಗಳೂರಿನ ಸೆಂಟ್ರಲ್ ಕಾಲೇಜ್ ಸೆನೆಟ್ ಹಾಲ್‌ನಲ್ಲಿ ಯಶಸ್ವಿಯಾಗಿ ಜರುಗಿತು.

ಪ.ಬಂಗಾಳದ ವಿಧಾನ ಸಭಾಪತಿಗಳು ಹಾಗೂ ಆಲ್ ಇಂಡಿಯಾ ಲಾಯರ್ಸ್ ಯುನಿಯನ್ ಉಪಾಧ್ಯಕ್ಷರಾದ ಕಾ॥ಎಚ್. ಎ ಹಲೀಂರವರು ಸಮ್ಮೇಳನ ಉದ್ಘಾಟಿಸಿದರು. ರಾಷ್ಟ್ರೀಯ ಐಕ್ಯತೆ-ಸಮಗ್ರತೆಗೆ ಒದಗಿರುವ ಗಂಡಾಂತರ ಕುರಿತು ಎಚ್ಚರಿಸಿದ ಅವರು ವಕೀಲರು ಹಾಗೂ ವಿದ್ಯಾರ್ಥಿ ಅಧ್ಯಾಪಕರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಈ ಸಮ್ಮೇಳನ ಚರ್ಚಿಸಿ ಕಾರ್ಯ ಯೋಜನೆಯೊಂದನ್ನು ರೂಪಿಸುವಂತೆ ಕರೆ ನೀಡಿದರು.

ಪ್ರೊ॥ಎ. ಜಿ.ಸದಾಶಿವ (ವಕೀಲರ ಸಂಘದ ಅಧ್ಯಕ್ಷ) ಮುಖ್ಯ ಅತಿಥಿಗಳಾಗಿದ್ದರು. ಎ.ಐ.ಎಲ್.ಯು. ರಾಜ್ಯ ಅಧ್ಯಕ್ಷರಾದ ಎಸ್.ವಿ ರಾಘವಾಚಾರ್ ಅಧ್ಯಕ್ಷತೆ ವಹಿಸಿದ್ದರು. ಪ್ರಧಾನ ಕಾರ್ಯದರ್ಶಿ ವಿ.ಗೋಪಾಲಗೌಡರವರು ವರದಿ ಮಂಡಿಸಿದರು.

ಸಮ್ಮೇಳನದಅಂಗವಾಗಿ ರಾಷ್ಟ್ರೀಯ ಐಕ್ಯತೆ-ಸಮಗ್ರತೆ ಹಾಗೂ ವಕೀಲರು ಎದುರಿಸುವ ಸಮಸ್ಯೆ ಮತ್ತು ಪರಿಹಾರ ಕುರಿತು ವಿಚಾರ ಸಂಕಿರಣವನ್ನು ನಡೆಸಲಾಯಿತು. ಅಡ್ವೊಕೇಟ್ ಶಿವರಾಜ್ ಪಾಟೀಲ್, ಜಯರಾಂ ಶ್ರೀ.ಬರಗೂರು ರಾಮಚಂದ್ರಪ್ಪ (ಬಂಡಾಯಸಾಹಿತಿ) ಹಾಗೂ ಎಚ್. ಎನ್.ನಾಗಮೋಹನದಾಸ್ ವಿಚಾರ ಮಂಡಿಸಿ ಮಾತನಾಡಿದರು. ಎರಡನೇಯ ಅಧಿವೇಶನದಲ್ಲಿ ಜವೀದ್ ರಹೀಮ್, ಸಿ.ಬಿ.ಶ್ರೀನಿವಾಸನ್, ರವಿವರ್ಮಕುಮಾರ್, ಹಾಗೂ ವಿದ್ಯಾರ್ಥಿಗಳ ಪರವಾಗಿ ಟಿ ಎನ್.ಶಿವಾರೆಡ್ಡಿಯವರು ವಿಷಯ ಮಂಡಿಸಿದರು.

ನೂತನ ರಾಜ್ಯ ಸಮಿತಿ

ಎಸ್ ವಿ. ರಾಘವಾಚಾರ್ (ಅಧ್ಯಕ್ಷರು) ಹೆಚ್.ಎಸ್.ಶೇಷಾದ್ರಿ (ಉಪಾಧ್ಯಕ್ಷರು) ವಿ ಗೋಪಾಲಗೌಡ [ಪ್ರಧಾನ ಕಾರ್ಯದರ್ಶಿ] ರಘುಪತಿ ಖಜಾಂಚಿ ಎಸ್ ಶಂಕರಪ್ಪ, ನರಹರಿ (ಸಹ ಕಾರ್ಯದರ್ಶಿಗಳು) ಶ್ರೀಮತಿ ಹೇಮಾವತಿ, ಸುಗುಣ, ವಿಶ್ವನಾಥ್, ಜವೀದ್ ರಹೀಮ್; ಕೃಷ್ಣಮೂರ್ತಿ, ನೀಲಕಂಠರಾವ್, ವೆಂಕಟರೆಡ್ಡಿ, ಆನಂದ್, ಹಿರೇಮಠ, ರಾಮಯ್ಯ ವೆಂಕಟರೆಡ್ಡಿ, ಹನುಮಂತ, ಟಿ.ಎನ್.ಶಿವಾರೆಡ್ಡಿಯವರುಗಳು ರಾಜ್ಯ ಸಮಿತಿ ಸದಸ್ಯರಾಗಿ ಆಯ್ಕೆಗೊಂಡರು.

ಗುಲ್ಬರ್ಗಾದಲ್ಲಿ ರೈಲ್ ರೋಖೋ ಬಂಧನ

ಗುಲ್ಬರ್ಗಾನಗರ ದಿನದಿಂದ ದಿನಕ್ಕೆ ಬೆಳೆಯುತ್ತಿದ್ದು ದಿನ ನಿತ್ಯ ಪ್ರಯಾಣಿಸುವ ಸಾವಿರಾರು ನೌಕರರು, ವ್ಯಾಪಾರಸ್ಥರು, ಸಾರ್ವಜನಿಕರು ವಿದ್ಯಾರ್ಥಿಗಳಿಂದ ಇಲಾಖೆಗೆ 90,ಸಾವಿರದವರೆವಿಗೆ ಆದಾಯ ಬರುತ್ತಿದೆ. ರೈಲ್ವೆ ಇಲಾಖೆಯ ನಿರ್ಲಕ್ಷ ಮನೋಭಾವದಿಂದಾಗಿ ಸಂಕಷ್ಟಕ್ಕೀಡಾಗಿರುವ ಗುಲ್ಬರ್ಗಾ ಪ್ರಯಾಣಿಕರಿಗೆ ರೈಲ್ವೆ ಸೌಕರ್ಯವನ್ನು ಹೆಚ್ಚಿಸಬೇಕೆಂದು ಒತ್ತಾಯಿಸಿ ಫೆಬ್ರವರಿ 12ರಂದು ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ಪ್ರಾಂತ ರೈತ ಸಂಘ, ಸಿ.ಐ.ಟಿ.ಯು, ಡಿ ವೈ.ಎಫ್.ಐ, ಎಸ್.ಎಫ್.ಐ. ಮುಂತಾದ ಸಂಘಟನೆಗಳ ನೂರಾರು ಕಾರ್ಯಕರ್ತರು ಗುಲ್ಬರ್ಗಾ ರೈಲ್ವೆ ನಿಲ್ದಾಣದಲ್ಲಿ 'ರೈಲ್ ರೋಖೋ' ನಡೆಸಿದರು.

ಮದ್ರಾಸ್-ಮುಂಬಯಿ ಜನತಾ ಎಕ್ಸ್ ಪ್ರೆಸ್ ರೈಲು ಹಿಂದಿನಂತೆ ಪ್ರತಿ ನಿತ್ಯ ಸಂಚಾರ ಮಾಡಬೇಕು. ಸೋಲಾಪುರದಿಂದ ಗುಲ್ಬರ್ಗಾ ಮಾರ್ಗವಾಗಿ ಬೆಂಗಳೂರಿಗೆ ಬೆಳಗ್ಗೆ ತಲುಪುವಂತೆ ಹೊಸದೊಂದು ರೈಲನ್ನು ಹಾಕಬೇಕು, ಸೋಲಾಪುರದ ಬಳಿ ಇರುವ ಡಾನ್ಡ್‌ನಿಂದ ಗುಲ್ಬರ್ಗಾವರೆವಿಗೆ ಎರಡು ಮಾರ್ಗದ ರೈಲುವೆ ಸಂಚಾರವನ್ನು ಕೂಡಲೇ ಮುಗಿಸಬೇಕು, ಎಂಬಿತ್ಯಾದಿ ಪ್ರಮುಖ ಬೇಡಿಕೆಗಳಾಗಿ ನಡೆದ ಈ ಚಳುವಳಿ ಮದ್ರಾಸ್ ಮುಂಬಯಿ ಮೈಲ್ ರೈಲನ್ನು 45 ನಿಮಿಷ ತಡೆದು ಪಿಕೇಟಿಂಗ್ ಮಾಡಲಾಯಿತು. 400ಕ್ಕೂ ಹೆಚ್ಚು ಕಾರ್ಯಕರ್ತರನ್ನು ರೈಲ್ವೆ ಪೋಲಿಸರು ಬಂಧಿಸಿ ಬಿಡುಗಡೆ ಮಾಡಿದರು.

ಕಮರ್ಷಿಯಲ್ ಡಿವಿಜಿನಲ್ ಮೇನೆಜರ್‌ರವರು ಮಾರ್ಚ್ 1 ರೊಳಗಾಗಿ ನಿಮ್ಮ ಬೇಡಿಕೆಗಳ ಕುರಿತು ಸೂಕ್ತ ಕ್ರಮ ಕೈಗೊಳ್ಳುವುದಾಗಿ ಆಶ್ವಾಸನೆ ನೀಡಿದರು. ನಂತರ ನಡೆದ ಸಭೆಯನ್ನುದ್ದೇಶಿಸಿ ಜಿಲ್ಲಾ ಪಕ್ಷದ ಕಾರ್ಯದರ್ಶಿ ಕಾಂ. ಕಲ್ಲಪ್ಪ ಕಿರಣಗಿ, ಜಿಲ್ಲಾ ಪರಿಷತ್ ಸದಸ್ಯ ಕಾಂ. ಮಾರುತಿ ಮಾನ್ಪಡೆ, ನಗರ ಸಭಾ ಸದಸ್ಯ ಕಾಂ. ಸಿ.ಎ. ಪಾಟೀಲ್‌ರವರು ಮಾತನಾಡಿ ಕೇಂದ್ರ ಸರ್ಕಾರ ಗುಲ್ಬರ್ಗಾ ಜನತೆಯನ್ನು ಕಡೆಗಣಿಸಿರುವ ನೀತಿಯನ್ನು ಖಂಡಿಸಿ ಬೇಡಿಕೆಗಳನ್ನು ಬಗೆ ಹರಿಸದಿದ್ದರೆ ಮುಂದಿನ ಹಂತದ ಹೋರಾಟಕ್ಕೆ ಸಿದ್ಧರಾಗಬೇಕೆಂದು ಕರೆ ನೀಡಿದರು.

ಬಂದ್ ಯಶಸ್ವಿಗೊಳಿಸಲು ಡಿ. ವೈ. ಎಫ್. ಐ. ಕರೆ

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ ಕರ್ನಾಟಕ ರಾಜ್ಯ ಸಮಿತಿ ಸಭೆಯು ಫೆ.6, 7 ರಂದು ಎಚ್. ಎನ್. ನಾಗಮೋಹನ್‌ದಾಸ್ ಅಧ್ಯಕ್ಷತೆಯಲ್ಲಿ ಬಳ್ಳಾರಿಯಲ್ಲಿ ಸಭೆ ಸೇರಿ ಮಾರ್ಚ್ 15 ರಂದು ಎಡ ಪ್ರಜಾಸತ್ತಾತ್ಮಕ, ಜಾತ್ಯಾತೀತ ಪಕ್ಷಗಳು ನೀಡಿರುವ ಭಾರತ ಬಂದ್ ಕಾರ್ಯಕ್ರಮಕ್ಕೆ ಪೂರ್ಣವಾಗಿ ಬೆಂಬಲಿಸಿ ಅದನ್ನು ರಾಜ್ಯದಲ್ಲಿ ಯಶಸ್ವಿಗೊಳಿಸಲು ನಿರ್ಧರಿಸಲಾಯಿತು. ಎಲ್ಲಾ ಘಟಕಗಳು ಈ ಬಗ್ಗೆ ಪೂರಕ ಕ್ರಮ ಕೈಗೊಳ್ಳಲು ಕರೆ ಕೊಡಲಾಗಿದೆ.

ಮಾರ್ಚ್ 23 ರಂದು 'ಭಗತ್ ಸಿಂಗ್ ಹುತಾತ್ಮ ದಿನ'ವನ್ನು ಹಾಗೂ ನಿರುದ್ಯೋಗವಿರೋಧಿ ವಾರಾಚರಣೆಯ ಅಂಗವಾಗಿ ಮಾರ್ಚ್27ರ ವರೆಗೆ ನಿರುದ್ಯೋಗ, ಸತಿ, ವರದಕ್ಷಿಣೆ ಮೊದಲಾದ ವಿಚಾರಗಳ ಬಗ್ಗೆ ಸಭೆ, ಗೋಷ್ಠಿ ನಡೆಸಲು ಹಾಗೂ ಮಾರ್ಚ್ 28 ರಂದು ಖಾಲಿ ಹುದ್ದೆಗಳ ಭರ್ತಿಗಾಗಿ ತಾಲೂಕು ಜಿಲ್ಲಾ ಕೇಂದ್ರಗಳಲ್ಲಿ ಮೆರವಣಿಗೆ ಸಭೆ ನಡೆಸಲು ಕರೆಕೊಡಲಾಗಿದೆ.

ಡಿ.ವೈ.ಎಫ್.ಐ. ಕಾರ್ಯಕ್ರಮ ಹಾಗೂ ಇತರೆ ಸಾಹಿತ್ಯಗಳನ್ನು ಹೊರತರಲೂ ನಿರ್ಧರಿಸಲಾಗಿದೆ. ರಾಜ್ಯ ಮಟ್ಟದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳ ಬಗ್ಗೆ ಡಿ ವೈ ಎಫ್ ಐ ಸದಸ್ಯರಿಗೆ ತರಬೇತು ನೀಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ರಾಜ್ಯ ಮಟ್ಟದ ಅಧ್ಯಯನ ಶಿಬಿರ ನಡೆಸಲು ನಿರ್ಧರಿಸಲಾಗಿದೆ.

ರೈತರಮೆರವಣಿಗೆಗೆ ಬೆಂಬಲ

ಏಪ್ರಿಲ್ 3ರಂದು ಕರ್ನಾಟಕಪ್ರಾಂತ ರೈತ ಸಂಘದನೇತೃತ್ವದಲ್ಲಿ ಬೆಂಗಳೂರಿನಲ್ಲಿ ನಡೆಯುವ ಬೃಹತ್ ಮೆರವಣಿಗೆಗೆ ಡಿ ವೈ.ಎಫ್.ಐ. ರಾಜ್ಯ ಸಮಿತಿಯು ಪೂರ್ಣ ಬೆಂಬಲ ವ್ಯಕ್ತ ಪಡಿಸಿದ್ದು, ಇದರಲ್ಲಿ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಭಾಗವಹಿಸಲು ಯುವ ಜನರಿಗೆ ಕರೆ ಕೊಡಲಾಗಿದೆ.

ಬಂದ್‌ಗೆ ಸಿದ್ಧಗೊಳ್ಳುತ್ತಿರುವ ಬಳ್ಳಾರಿ

ಪಕ್ಷದ ಬಳ್ಳಾರಿ ಜಿಲ್ಲಾ ಪ್ರಾದೇಶಿಕ ಸಮಿತಿ ಇತ್ತೀಚೆಗೆ ಸಭೆಸೇರಿ ಮಾರ್ಚ್ 15ರ ಭಾರತ್ ಬಂದ್ ಯಶಸ್ವಿಗೊಳಿಸಲು ಜಿಲ್ಲೆಯಾದ್ಯಂತ ಪ್ರಚಾರ ಕಾರ್ಯಕ್ರಮವನ್ನು ರೂಪಿಸಿದೆ. ಫೆಬ್ರವರಿ 15 ರಿಂದ 21ರ ವರೆವಿಗೆ ಜಿಲ್ಲಾ ಸಮಿತಿ ಸದಸ್ಯರು ಎಲ್ಲಾ ತಾಲೋಕುಗಳಲ್ಲಿ ಪ್ರವಾಸ ಕೈಗೊಂಡು ಪಕ್ಷ ದೇಶದ ಮುಂದಿಟ್ಟಿರುವ 17 ಅಂಶಗಳ ಪರ್ಯಾಯ ಕಾರ್ಯಕ್ರಮ ಹಾಗೂ ಕೇಂದ್ರದ ರಾಜೀವ್‌ಗಾಂಧಿ ಸರ್ಕಾರ ಎಲ್ಲಾ ಕ್ಷೇತ್ರಗಳಲ್ಲಿ ವಿಫಲವಾಗಿರುವ ಅಂಶಗಳನ್ನು ವಿವರಿಸುವ ಸಭೆ ಹಾಗೂ ಬಹಿರಂಗ ಸಭೆಗಳನ್ನು ಸಂಘಟಿಸಲು ತೀರ್ಮಾನಿಸಿದೆ. ಈ ಮಹತ್ವ ಪೂರ್ಣ ಕಾರ್ಯವನ್ನು ಅತ್ಯಂತ ಯಶಸ್ವಿಗೊಳಿಸಲು ಪಕ್ಷದ ಶಾಖೆಗಳು ಹಾಗೂ ಸಾಮೂಹಿಕ ಸಂಘಟನೆಗಳು ತನ್ನಶಕ್ತಿ ಮೀರಿ ಶ್ರಮಿಸುವಂತೆ ಬಳ್ಳಾರಿ ಜಿಲ್ಲಾ ಪ್ರಾದೇಶಿಕ ಸಮಿತಿ ಕರೆ ನೀಡಿದೆ.

ಬಳ್ಳಾರಿ "ಜಿಲ್ಲಾ ಪರಿಷತ್ ಚಲೋ"

ಬಳ್ಳಾರಿ ಜಿಲ್ಲೆಯ ಜನತೆಯು ಮೂಲಭೂತ ಸಮಸ್ಯೆಗಳ ಪರಿಹಾರದತ್ತ ಗಮನಹರಿಸದ ಜಿಲ್ಲಾ ಪರಿಷತ್‌ನ ನಿರ್ಲಕ್ಷ್ಯ ಧೋರಣೆಯನ್ನು ಪ್ರತಿಭಟಿಸಿ, ಸಮಸ್ಯೆಗಳ ಪರಿಹಾರಕ್ಕೆ ಒತ್ತಾಯಿಸಿ ಸಿ.ಐ.ಟಿ.ಯು, ಕರ್ನಾಟಕ ಪ್ರಾಂತ ರೈತ ಸಂಘ, ಎಸ್.ಎಫ್.ಐ. ಮತ್ತು ಡಿ.ವೈ.ಎಫ್.ಐ. ಸಂಘಟನೆಗಳ ನೇತೃತ್ವದಲ್ಲಿ ಸಾವಿರಾರು ಜನತೆ ಜನವರಿ 29 ರಂದು ಬಳ್ಳಾರಿ ನಗರದಲ್ಲಿ ಯಶಸ್ವಿ 'ಜಿಲ್ಲಾ ಪರಿಷತ್ ಚಲೋ' ನಡೆಸಿದರು. ಈ ಮೆರವಣಿಗೆಯಲ್ಲಿ ರೈತ ಕಾರ್ಮಿಕ-ವಿದ್ಯಾರ್ಥಿ- ಯುವಜನರು ಅದರಲ್ಲೂ ಮಹಿಳೆಯರು ಅತ್ಯಧಿಕ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ರಾಜ್ಯ ಸರ್ಕಾರದ ವಿಫಲತೆಯನ್ನು ಎತ್ತಿ ತೋರಿಸುತ್ತಲೇ ಕೇಂದ್ರ ಸರ್ಕಾರದ ಜನ ವಿರೋಧಿ ನೀತಿಗಳನ್ನು ಖಂಡಿಸಿ ಭಾರತ್ ಬಂದ್‌ನ್ನು ಯಶಸ್ವಿಗೊಳಿಸಲು ಸಹ ಪೂರಕವಾದ ಕಾರ್ಯಕ್ರಮವಿದಾಗಿತ್ತು.

ಜಿಲ್ಲೆಯಲ್ಲಿನ ಪರಂಪೋಕ್, ಇನಾಂ ಭೂಮಿಗಳಿಗೆ ಪಟ್ಟ, ಕೃಷಿ ಕೂಲಿಗಾರರಿಗೆ ಖಾಲಿ ಇರುವ ಜಮೀನಿನ ಹಂಚಿಕೆ, ನೀರಾವರಿ ಯೋಜನೆಗಳು, ಬೆಳೆಯಿಲ್ಲದೇ ನಷ್ಟ ಹೊಂದಿರುವ ರೈತರ ಸಾಲ ಮನ್ನಾ, ಮುಚ್ಚಿದ ಕಾರ್ಖಾನೆಗಳು ತೆರೆಯಲು ಆಗ್ರಹ, ಎ ಪಿ.ಎಂ.ಸಿ.ಯಲ್ಲಿನ ಅವ್ಯವಹಾರಗಳ ತಡೆಗೆ ಒತ್ತಾಯ, ಕನಿಷ್ಠ ಕೂಲಿಗಾಗಿ, ಎರಡನೆಯ ಹಂತದ ಕುಡಿಯುವ ನೀರಿನ ಯೋಜನೆಗಳು, ಬಳ್ಳಾರಿಯಲ್ಲಿ ಸ್ನಾತಕೋತ್ತರ ಕೇಂದ್ರದ ಆರಂಭಕ್ಕೆ ಒತ್ತಾಯ, ಹಾಸ್ಟೆಲ್‌ಗಾಗಿಉದ್ಯೋಗ ನೇಮಕಾತಿ, ಕೊಳಚೆ ಪ್ರದೇಶಗಳ ಅಭಿವೃದ್ಧಿ ಕ್ರಮಗಳಿಗಾಗಿ, ನೂತನ ಶಿಕ್ಷಣ ನೀತಿಯ ಅನುಷ್ಠಾನ ರದ್ದುಗೊಳಿಸಲು ಹಾಗೂ ಪರಿಶಿಷ್ಟ ಜಾತಿ ಬುಡಕಟ್ಟು ಜನರು ಮಹಿಳೆಯರ ಹಾಗೂ ಅಲ್ಪ ಸಂಖ್ಯಾತರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ತಡೆಯುವುದು ಮುಂತಾದ ಬೇಡಿಕೆಗಳಿದ್ದವು.

ನಗರದ ಪ್ರಮುಖ ಬೀದಿಗಳ ಮೂಲಕನಡೆದ ಮೆರವಣಿಗೆಯು ಜಿಲ್ಲಾ ಪರಿಷತ್ ಕಛೇರಿಯನ್ನು ತಲುಪಿತು. ಸಭೆಯಿಂದ ಆಗಮಿಸಿದ ಜಿಲ್ಲಾ ಪರಿಷತ್ ಅಧ್ಯಕ್ಷರು ಮನವಿ ಸ್ವೀಕರಿಸಿದರಲ್ಲದೇ ಜನತೆಯ ಒತ್ತಾಯದಿಂದಾಗಿ ಫೆಬ್ರವರಿ-8ಕ್ಕೆ ಮಾತುಕತೆಗೆ ಕರೆಯಲಾಗಿತ್ತು.

ಜನತೆಯನ್ನುದ್ದೇಶಿಸಿ ಜಂಟಿ ಕ್ರಿಯಾ ಸಮಿತಿ ಸಂಚಾಲಕರಾದ ಕಾ. ಎಸ್.ಪ್ರಸನ್ನಕುಮಾರ್, ಮತ್ತು ಯು.ಬಸವರಾಜ್, ಎಸ್.ವೈ.ಗುರುಶಾಂತ್, ಎಲ್.ಮಂಜುನಾಥ್, ವೀರಸಂಗಯ್ಯ, ರಘುನಾಥ್ ಸುರೇಶ್ ಕುಷ್ಠಗಿ ಮುಂತಾದವರು ಮಾತನಾಡಿದರು. ಸಮಸ್ಯೆಗಳು ಬಗೆಹರಿಯದಿದ್ದಲ್ಲಿ ಉಗ್ರ ಹೋರಾಟ ಮುನ್ನಡೆಸುವ ತೀರ್ಮಾನ ಕೈಗೊಳ್ಳಲಾಯಿತು.

ಆಟೋ ಚಾಲಕರ ಯಶಸ್ವಿ ಮುಷ್ಕರ

ಕೇಂದ್ರ ಸರ್ಕಾರ ಇತ್ತೀಚೆಗೆ ಪೆಟ್ರೋಲ್ ಬೆಲೆ ಏರಿಸಿದ್ದನ್ನು ಪ್ರತಿಭಟಿಸಿ ಆಟೋ ರಿಕ್ಷಾ ಡ್ರೈವರ್ಸ್ ಯುನಿಯನ್ (ಎ.ಆರ್.ಡಿ ಯು) ಜನವರಿ 18 ರಂದು ನೀಡಿದ ಕರೆಯಂತೆ ಬೆಂಗಳೂರು ನಗರದಲ್ಲಿ ಅತ್ಯಂತ ಯಶಸ್ವಿ ಆಟೋ ಮುಷ್ಕರವನ್ನು ನಡೆಸಲಾಯಿತು. 12 ಸಹಸ್ರ ಆಟೋಗಳು 20 ಸಹಸ್ರ ಚಾಲಕರು ಮುಷ್ಕರದಲ್ಲಿ ಪಾಲ್ಗೊಂಡಿದ್ದರು.

ರಾಜ್ಯದ ರಾಜ್ಯಪಾಲರಿಗೆ ಸಾರಿಗೆ ಸಚಿವ.ಪಿ.ಜಿ.ಆರ್.ಸಿಂಧ್ಯರಿಗೂ ಮನವಿ ಸಲ್ಲಿಸಿ ಪೆಟ್ರೋಲ್ ಬೆಲೆ ಏರಿಕೆ ತಡೆಗಟ್ಟಿ ಹಾಗೂ ರಿಯಾಯಿತಿ ದರದಲ್ಲಿ ಪೆಟ್ರೋಲ್ ಒದಗಿಸಬೇಕೆಂಬ ನ್ಯಾಯಯುತ ಬೇಡಿಕೆಗಳನ್ನು ಬಗೆಹರಿಸಬೇಕು ಹಾಗೂ ಪ್ರಯಾಣ ದರವನ್ನು 2-ರೂನಿಂದ 2.ರೂ 50 ಪೈಸೆಗೂ ಕಿ.ಮೀ ಒಂದಕ್ಕೆ 1-ರೂ ನಿಂದ 1ರೂ 30 ಪೈಸೆಗೂ ಹೆಚ್ಚಿಸಬೇಕೆಂದು ಮನವಿ ಪತ್ರದಲ್ಲಿ ಒತ್ತಾಯಿಸಲಾಗಿದೆ.

ಸರ್ಕಾರ ತಾಳಿರುವ ಉದಾಸೀನ ಮನೋಭಾವ ಪ್ರತಿಭಟಿಸಿ ಏಪ್ರಿಲ್ 4 ರಂದು ಹೋರಾಟದಎರಡನೆಯ ಹಂತವಾಗಿ ನೂರಾರು ಮಂದಿ ಆಟೋಚಾಲಕರು ಮೆರವಣಿಗೆ ನಡೆಸಿ ನಗರದ ಚಿಕ್ಕಲಾಲ್‌ಬಾಗ್‌ನಲ್ಲಿ ಬಹಿರಂಗ ಸಭೆ ನಡೆಸಿದರು ಸಭೆಯನ್ನುದ್ದೇಶಿಸಿ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಕಾ॥ಎ. ವಿ.ರಮೇಶ್, ಅಧ್ಯಕ್ಷ ಜಿ.ಸುಬ್ಬರಾವ್, ಸಂಘಟನಾ ಕಾರ್ಯದರ್ಶಿ ಕಾ॥ಹೆಚ್. ಆರ್.ರವಿ, ನಾರಾಯಣ ಮುಂತಾದವರು ಮಾತನಾಡಿ ಬೇಡಿಕೆಗಳನ್ನು ಪಡೆಯಲು ತೀವ್ರ ಹೋರಾಟಕ್ಕೆ ಸಿದ್ಧರಾಗಲು ಕರೆ ನೀಡಿದರು.

ರೈತ ಸಂಘದ ಬಹಿರಂಗ ಸಭೆ

ಜನವರಿ 17 ರಂದು ಕರ್ನಾಟಕ ಪ್ರಾಂತ ರೈತ ಸಂಘದ ಲಿಂಗಸುಗೂರ ತಾಲೋಕಿನ ಕೋಟಾದಲ್ಲಿ ಸಾವಿರಕ್ಕೂ ಹೆಚ್ಚು ರೈತರು ಸಭೆ ನಡೆಸಿದರು. ಈ ಸಭೆಯನ್ನುದ್ದೇಶಿಸಿ ರಾಜ್ಯ ಕಾರ್ಯದರ್ಶಿಗಳಲ್ಲೊಬ್ಬರಾದ ಕಾ॥ಚಂದ್ರಶೇಖರಬಾಳೆ ತಾಲೋಕು ಸಮಿತಿ ಕಾರ್ಯದರ್ಶಿ ಕಾ॥ಕಂಟೆಪ್ಪಮಟ್ಟೂರು ಸಿ ಪಿ. ಐ.(ಎಂ) ಹಟ್ಟಿ ಮಂಡಲದನಾಯಕ ಅಮಂಗುಂಡಪ್ಪ ಉಪ ನಾಯಕ ಕಾ॥ ಹನುಮಂತ ಮಾತನಾಡಿದರು. ಡಿ 9ರ ದೆಹಲಿಯ ಮಜ್ದೂರ್ ಕಿಸಾನ್ ಜಾಥ ಬಗ್ಗೆ ವಿವರಿಸಿ ಮಾರ್ಚ್ 15ರ ಭಾರತ್ ಬಂದ್ ಯಶಸ್ವಿಗೊಳಿಸಲು ಕರೆ ನೀಡಿದರು.

○

ಪಶ್ಚಿಮ ಬಂಗಾಳ

ಅಭೂತಪೂರ್ವ 60 ಲಕ್ಷ ಮಾನವ ಸರಪಳಿ

ಜನವರಿ 31ರ ಮಧ್ಯಾಹ್ನ ಪಶ್ಚಿಮ ಬಂಗಾಳದ ಉದ್ದಗಲದ 17 ಜಿಲ್ಲೆಗಳನ್ನು ಒಳಗೊಂಡು ಅಭೂತಪೂರ್ವ ಮಾನವ ಸರಪಣಿ ರಚಿಸಲಾಯಿತು. ಸುಮಾರು 60 ಲಕ್ಷ ಜನ ಸುಮಾರು 4500 ಕಿ.ಮೀ. ಉದ್ದದ ಸರಪಣಿ ರಚಿಸಿದರು. ಈ ಕಾರ್ಯಕ್ರಮಕ್ಕೆ ಜನರ ಉತ್ಸಾಹ ಎಷ್ಟಿತ್ತೆಂದರೆ ಹಲವು ಕಡೆ ಜನ ಜಾಸ್ತಿ ಬಂದದ್ದರಿಂದ, 'ಮಾನವ ಗೋಡೆ' ರಚಿಸಬೇಕಾಯಿತು.

ಹಲವು ದಿನಗಳ ಶ್ರಮ ಅಲ್ಲದೆ ಕೆಲವು ರಿಹರ್ಸಲ್‌ಗಳನ್ನು ಮಾಡಲಾಗಿತ್ತು ಈ ಕಾರ್ಯಕ್ರಮಕ್ಕೆ. ಸರಪಣಿ 17 ಜಿಲ್ಲೆಗಳ ಹೆಚ್ಚಿನ ಹೆದ್ದಾರಿಗಳನ್ನೊಳಗೊಂಡಿತು. ನಿಗದಿ ಪಡಿಸಿದ ಸಮಯಕ್ಕೆ ಸರಿಯಾಗಿ ಸರಪಣಿ ಸಿದ್ಧವಾಯಿತು. ರಾಜೀವ ಗಾಂಧಿ ರಾಜೀನಾಮೆ ಕೊಡಬೇಕು. ಮಧ್ಯಂತರ ಚುನಾವಣೆ ನಡೆಯಬೇಕು ಎಂಬಿತ್ಯಾದಿ ಘೋಷಣೆಗಳು ಸರಪಣಿ ರಚನೆಯ ಅವಧಿಯಲ್ಲಿ ಕೇಳಿ ಬಂದವು. ಕೇರಳದಂತೆ ಪಶ್ಚಿಮ ಬಂಗಾಳದ ಮಾನವ ಸರಪಣಿ ಕೇವಲ ಒಂದು ಆಗಿರಲಿಲ್ಲ. ಹಲವು ಸರಪಣಿಗಳ ಧಾರೆಗಳು ಸೇರಿದ್ದವು.

60 ಲಕ್ಷ ಜನ 'ಮಾನವ ಸರಪಣಿ'ಯ ಕೊಂಡಿಗಳಾದರೆ ಸುಮಾರು ಒಂದು ಕೋಟಿ ಜನ ಈ ಕಾರ್ಯಕ್ರಮವಿದನ್ನು ವೀಕ್ಷಿಸಿದರು. ಅಂದರೆ ಪಶ್ಚಿಮ ಬಂಗಾಳದ ಜನ ಸಂಖ್ಯೆಯ 6ರಲ್ಲಿ ಒಬ್ಬ ಈ 'ಅಭೂತ ಪೂರ್ವ ಮಾನವ ಸರಪಣಿ'ಯಲ್ಲಿ ಭಾಗವಹಿಸಿದ್ದರು. ಮಾನವ ಸರಪಣಿಯ ಕಾರ್ಯಕ್ರಮ ಮುಗಿದ ಮೇಲೆ ಸಾರ್ವಜನಿಕ ಸಭೆಗಳನ್ನು ಏರ್ಪಡಿಸಲಾಗಿತ್ತು. ಕಲ್ಕತ್ತಾದಲ್ಲಿ ಕಾ|| ಜ್ಯೋತಿ ಬಸು ಇಂತಹ ಸಭೆ ಗಳನ್ನುದ್ದೇಶಿಸಿ ಮಾತನಾಡುತ್ತಾ ತ್ರಿಪುರಾದ ಪರಿಸ್ಥಿತಿ ಬಗ್ಗೆ ವಿವರಿಸಿದರು. ಕಾ|| ಸರೋಜ ಮುಖರ್ಜಿ (ಎಡರಂಗದ ಸಂಚಾಲಕರು) ಈ ಕಾರ್ಯಕ್ರಮದಲ್ಲಿ ಅತ್ಯುತ್ಸಾಹದಿಂದ ಭಾಗವಹಿಸಿದ್ದಕ್ಕಾಗಿ ಜನರನ್ನು ಅಭಿನಂದಿಸಿದರು.

ಅಮೇರಿಕನ್ ಪಡೆಗಳಿಗೆ ಪನಾಮೀಯರ ವಿರೋಧ

ಲ್ಯಾಟಿನ್ ಅಮೇರಿಕಾದಲ್ಲಿ ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಅತ್ಯಂತ ದೊಡ್ಡ ಮಿಲಿಟರಿ ನೆಲೆಯಾದ ಪನಾಮಾ ಕಾಲುವೆ ಪ್ರದೇಶದಿಂದ ಅಮೇರಿಕನ್ ಸೇನಾ ಪಡೆಗಳನ್ನೆಲ್ಲಾ ಒದ್ದೋಡಿಸಬೇಕೆಂದು ಪನಾಮಾದ ಸಶಸ್ತ್ರ ಪಡೆಗಳ ಮುಖಂಡರುಗಳು ಇದೇ ಫೆಬ್ರವರಿ 9ರಂದು ಒತ್ತಾಯಿಸಿದ್ದಾರೆ.

ಉತ್ತರ ಅಮೇರಿಕಾ ಖಂಡ ಹಾಗೂ ದಕ್ಷಿಣ ಅಮೇರಿಕಾ ಖಂಡದ ಸಂಸ್ಥಾನದಲ್ಲಿರುವ ಪನಾಮಾ ದೇಶದ ಕಾಲುವೆ ಪ್ರದೇಶದ ಹತ್ತು ಮೈಲಿ ವ್ಯಾಪ್ತಿಯಲ್ಲಿ ಹತ್ತು ಸಾವಿರ ಅಮೇರಿಕನ್ ಸೈನಿಕರಿದ್ದು ದಕ್ಷಿಣ ಹಾಗೂ ಮಧ್ಯ ಅಮೇರಿಕಾ ಖಂಡಗಳಲ್ಲಿ ಅಮೇರಿಕನ್ ಸೈನಿಕ ಮಧ್ಯ ಪ್ರವೇಶಗಳಿಗೆ ಇದು ಮಹತ್ವದ ಕೇಂದ್ರವಾಗಿದೆ. ಇಲ್ಲಿರುವ ಸೈನಿಕ ಶಾಲೆಯಲ್ಲಿ ಈಗಾಗಲೇ ಲ್ಯಾಟಿನ್ ಅಮೇರಿಕಾ ದೇಶಗಳ 25000 ಸೈನಿಕ ಅಧಿಕಾರಿಗಳಿಗೆ ತರಬೇತಿ ನೀಡಲಾಗಿದೆ. ಗೆರಿಲ್ಲಾ ವಿರೋಧಿ ತಂತ್ರಗಳ ತರಬೇತಿ ಕೇಂದ್ರ ಇಲ್ಲಿದೆ.

ಪನಾಮಾ ದೇಶದ ಇತಿಹಾಸ ಪೂರ್ಣವಾಗಿ ಪನಾಮಾ ಕಾಲುವೆಯ ಮೇಲೆ ಅದು ತನ್ನ ಸಾರ್ವ ಭೌಮತ್ವವನ್ನು ಸ್ಥಾಪಿಸುವ ಪ್ರಯತ್ನಗಳ ಇತಿಹಾಸವೇ ಎಂದರೂ ತಪ್ಪಾಗಲಾರದು. 1903ರ ನವಂಬರ್ 3ರಂದು ಪನಾಮಾ ಸ್ವತಂತ್ರವಾದ 15 ದಿನಗಳಲ್ಲೇ ಅಮೇರಿಕಾ ಅದರ ಮೇಲೆ ಚರಿತ್ರೆಯ ಅತ್ಯಂತ ದಮನಕಾರಿ ಸಂಧಿಯನ್ನು ಹೇರಿತು. ಇದರ ಪ್ರಕಾರವೇ ಪನಾಮಾ ದೇಶದ ಪ್ರದೇಶವಾದ ಪನಾಮಾ ಕಾಲುವೆಯ 10 ಮೈಲಿ ವ್ಯಾಪ್ತಿಯ ಮೇಲೆ ಅಮೇರಿಕಾ ಶಾಶ್ವತ ಅಧಿಕಾರ ಪಡೆಯಿತು. ನಂತರ ಅಲ್ಲಿ ಮಿಲಿಟರಿ ನೆಲೆ ಸ್ಥಾಪಿಸುವ ಹಕ್ಕನ್ನೂ ಅಮೇರಿಕಾ ಪಡೆದುಕೊಂಡಿತು. ಇದರ ಜೊತೆಗೆ ಪನಾಮೀಯ ಜನತೆಯ ಹೋರಾಟವೂ ಮುಂದುವರಿಯಿತು.

ಈಜಿಪ್ಟ್‌ನಲ್ಲಿ ಸುಯೇಜ್ ಕಾಲುವೆಯ ರಾಷ್ಟ್ರೀಕರಣದಿಂದ ಹುರುಪು ತುಂಬಿದ ಪನಾಮೀಯರು 1959 ನವಂಬರ್‌ನಲ್ಲಿ ಕಾಲುವೆ ಪ್ರದೇಶದಲ್ಲಿ ಮತ ಪ್ರದರ್ಶನ ನಡೆಸಿ ತಮ್ಮ ದೇಶದ ಬಾವುಟ ಹಾರಿಸಿದಾಗ ಅಮೇರಿಕನ್ ಸೈನಿಕರ ಗುಂಡೇಟು ಎದುರಿಸಬೇಕಾಯಿತು. 1964ರಲ್ಲಿ ಈ ಅನ್ಯಾಯಪೂರ್ಣ ಸಂಧಿಯನ್ನು ರದ್ದುಮಾಡಿ ಪನಾಮಾ ಕಾಲುವೆಯ ಮೇಲೆ ತಮ್ಮ ದೇಶದ ಸಾರ್ವಭೌಮತ್ವವಿರಬೇಕೆಂದು ಒತ್ತಾಯಿಸಿದ ಪನಾಮೀಯರ ಮೇಲೆ ಮತ್ತೊಮ್ಮೆ ದಬ್ಬಾಳಿಕೆ ನಡೆಯಿತು. ಆದರೂ ಮುಂದುವರಿದ ಹೋರಾಟದ ಪರಿಣಾಮವಾಗಿ 1977ರಲ್ಲಿ ಪನಾಮಾ ಮತ್ತು ಅಮೇರಿಕಾಗಳ ನಡುವೆ ಈ ಕಾಲುವೆ ಕುರಿತಾದ ಎರಡು ಸಂಧಿಗಳು ಏರ್ಪಟ್ಟವು. ಇದರ ಪ್ರಕಾರ 1999ರ ಡಿಸೆಂಬರ್ 31ರ ಮಧ್ಯಾಹ್ನದೊಳಗೆ ಕೊನೆಯ ಅಮೇರಿಕನ್ ಸೈನಿಕ ಈ ಕಾಲುವೆ ಪ್ರದೇಶದಿಂದ ಕಾಲ್ತೆಗೆಯಬೇಕು ಮತ್ತು ಈ ಕಾಲುವೆ ಪ್ರದೇಶ ತಟಸ್ಥ ಪ್ರದೇಶವಾಗಿರಬೇಕು. ಆದರೆ ಅಮೇರಿಕಾ ಈ ಎರಡೂ ಸಂಧಿಗಳನ್ನು ಉಲ್ಲಂಘಿಸುತ್ತಲೇ ಇದೆ.

ಕಳೆದ ವಾರ ಪನಾಮಾ ದೇಶದ ರಾಷ್ಟ್ರೀಯ ಪಡೆಗಳ ಕಮಾಂಡರ್ ಜನರಲ್ ನೋರಿಗಾರವರ ಮೇಲೆ ಅಮೇರಿಕನ್ ನ್ಯಾಯಾಲಯವೊಂದು ಮಾದಕ ಪದಾರ್ಥಗಳ ಕಳ್ಳ ಸಾಗಾಣಿಕೆಯ ಆಪಾದನೆ ಹೊರಿಸಿದ ಮೇಲೆ ಪನಾಮಾದಲ್ಲಿ ಅಮೇರಿಕನ್ ಪಡೆಗಳ ವಿರುದ್ಧ ಮತ್ತೆ ತೀವ್ರ ಪ್ರತಿಭಟನೆ ಕಂಡು ಬಂದಿದೆ.

1985ರಲ್ಲಿ ಅಮೇರಿಕನ್ ರಕ್ಷಣೆಯೊಡನೆ ನಿಕರಾಗುವಾದ ಮೇಲೆ ಆಕ್ರಮಣ ನಡೆಸಲು ಜನರಲ್ ನೋರಿಗಾ ನಿರಾಕರಿಸಿದಾಗ ಅವರ ಮೇಲೆ ರಾಜಕೀಯ ಹಾಗೂ ಆರ್ಥಿಕ ಬೆದರಿಕೆ ಹೊಡ್ಡಲ್ಗಿತ್ತು; ಈಗಿನ ಈ ಆಪಾದನೆ ಅಮೇರಿಕನ್ ರಾಜಕೀಯ ಪಿತೂರಿಯೆಂದು ಜನರಲ್ ನೋರಿಗಾ ಹೇಳಿದ್ದಾರೆ. ಪನಾಮಾ ಕಾಲುವೆಯ ಮೇಲೆ ತಮ್ಮ ಅಧಿಕಾರವನ್ನು ಮುಂದಿನ ಶತಮಾನದಲ್ಲೂ ಮುಂದುವರಿಸಲು ಇದು ಅಮೇರಿಕನ್ನರ ಪ್ರಯತ್ನದ ಅಂಗವೆಂದೂ ಹೇಳಲಾಗುತ್ತಿದೆ. ●

ಸಂಕ್ಷಿಪ್ತ ಸುದ್ದಿಗಳು

ಸಿ.ಐ.ಟಿ.ಯು. ತಮಿಳುನಾಡು ಸಮಾವೇಶ

ಸಿ.ಐ.ಟಿ.ಯು..ತಮಿಳುನಾಡು ರಾಜ್ಯ ಸಮಿತಿ 'ಭಾರತ ಸರ್ಕಾರದ ನೀತಿಗಳು-ಮುಚ್ಚುವಿಕೆ ಮತ್ತು ಬಿಕ್ಕಟು' ಬಗ್ಗೆ ರಾಜ್ಯ ಸಮಾವೇಶ ಸಂಘಟಿಸಿತ್ತು. ಸಾವಿರಾರು ಕಾರ್ಮಿಕರನ್ನು ಬೀದಿ ಪಾಲು ಮಾಡುವ ಸರ್ಕಾರದ ಆರ್ಥಿಕ ನೀತಿಗಳ ವಿರುದ್ಧ ಹೋರಾಡಲು ಸಮಾವೇಶ ಸಂಕಲ್ಪ ಮಾಡಿತು.

ರಾಜ್ಯ ಸಮಿತಿ ಕಳೆದ 3 ವರ್ಷಗಳಂತೆ ಕಿಸಾನ್ ಸಭಾ ಸಂಘಟನೆಗೆ 40,000 ರೂ.ಗಳ ನಿಧಿಯನ್ನು ನೀಡಿತು. ಇದು ರೈತ-ಕಾರ್ಮಿಕ ವರ್ಗ ಸಖ್ಯದ ಪ್ರತೀಕ.

ಸಾರ್ವಜನಿಕ ಕ್ಷೇತ್ರದ ಕಾರ್ಮಿಕರಿಗೆ ವಿಜಯ

ಪಶ್ಚಿಮ ಬಂಗಾಳದ ಇಂಜಿನೀಯರಿಂಗ್ ಮತ್ತಿತರ ಕ್ಷೇತ್ರಗಳ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರು ತಮ್ಮ 46 ದಿನಗಳ ಮುಷ್ಕರದ ನಂತರ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳುವುದರಲ್ಲಿ ಯಶಸ್ವಿಯಾಗಿದ್ದಾರೆ. ಬೇರೆ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳಂತೆ ತಾತ್ಕಾಲಿಕ ಪರಿಹಾರವನ್ನು ನಿರಾಕರಿಸಿದ ಬಿ.ಪಿ.ಇ. ಮಲತಾಯಿ ಧೋರಣೆ ವಿರುದ್ಧ ಈ ಮುಷ್ಕರ ಹೂಡಲಾಗಿತ್ತು.

ಕಾ|| ಬಿ.ಟಿ.ರಣದಿವೆ ಕಾರ್ಮಿಕರಿಗೆ ಮತ್ತು ಅವರ ಬೆಂಬಲಕ್ಕೆ ನಿಂತ ಎಡರಂಗದ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸಿದ್ದಾರೆ.

ತಮಿಳುನಾಡು ಬೆಳವಣಿಗೆಗಳ ಬಗ್ಗೆ ಪಿ.ಬಿ.

ಜನವರಿ 28 ರಂದು ತಮಿಳುನಾಡು ವಿಧಾನ ಸಭೆಯಲ್ಲಿ ನಡೆದ ಅವಮಾನಕಾರಿ ಘಟನೆಗಳು, ತನ್ನ ಅಲ್ಪ ಸಂಖ್ಯಾತ ಮಂತ್ರಿ ಮಂಡಲ ಉಳಿಸಿಕೊಳ್ಳಲು ವೀರಪ್ಪನ್ ನಾಯಕತ್ವದ ಎ.ಐ ಡಿ.ಎಮ್.ಕೆ. ಏನು ಮಾಡಲು ತಯಾರು ಎಂದು ತೋರಿಸಿದೆ. ಸ್ಪೀಕರ್ ಪಾಂಡ್ಯನ್ ತನ್ನ ಅಭೂತಪೂರ್ವ 'ರೂಲಿಂಗ್'ಗಳು ಮತ್ತು ಪೋಲೀಸರನ್ನು ಸದನದೊಳಗೆ ಕರೆದ ನಿರ್ಧಾರ ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಪ್ರಾಥಮಿಕ ನಿಯಮಗಳನ್ನು ಗಾಳಿಗೆ ತೂರಿದ್ದಾರೆ.

ಜನವರಿ 29 ರಂದು ನೀಡಿದ ಈ ಹೇಳಿಕೆಯಲ್ಲಿ ಪಾಲಿಟ್ ಬ್ಯೂರೋ ವಿರೋಧ ಪಕ್ಷಗಳು ಈ ಗಾಗಲೇ ಹೇಳುತ್ತಿದ್ದಂತೆ ಶ್ರೀಮತಿ ಜಾನಕಿಯವರದು ಅಲ್ಪಸಂಖ್ಯಾತ ಮಂತ್ರಿ ಮಂಡಲ ವೆಂಬುದು ಖಚಿತವಾಗಿರುವುದರಿಂದ ಇದನ್ನು ಕೊನೆಗಾಣಿಸಲು ಎಲ್ಲಾ ವಿರೋಧ ಪಕ್ಷಗಳಿಗೆ ಕರೆ ನೀಡಿತ್ತು.

ಮತ್ತಷ್ಟು ಅಮೇರಿಕನ್ ವಂಚನೆ ಬಯಲಿಗೆ

ಇತ್ತೀಚಿಗೆ ಗೋರ್ಬಚೆವ್ ಹಾಗೂ ರೇಗನ್ ಸಹಿ ಹಾಕಿದ ಐ..ಎನ್.ಎಫ್ ಸಂಧಿಯಲ್ಲಿ ಹೇಳಿರುವುದಕ್ಕಿಂತ ಹೆಚ್ಚಿನ ಸಂಖ್ಯೆಯ ಕ್ಷಿಪಣಿಗಳನ್ನು ಅಮೇರಿಕಾ ಹೊಂದಿದೆ ಎಂದು ಈಗ ತಿಳಿದು ಬಂದಿದೆ. ಪಶ್ಚಿಮ ಜರ್ಮನಿಯಲ್ಲಿ ತನ್ನ ಕ್ರೂಯಿಸ್ ಕ್ಷಿಪಣಿಗಳ ಸಂಖ್ಯೆಯ ಬಗ್ಗೆ ಅಲ್ಲಿಯ ಜನತೆಯನ್ನು ಅಮೇರಿಕನ್ ಸರ್ಕಾರ ವಂಚಿಸುತ್ತಾ ಬಂದಿದೆ. ಆದ್ದರಿಂದ ಐ.ಎನ್.ಎಫ್. ಸಂಧಿಯಾದ ನಂತರ ರಾತ್ರಿಯ ಅಂಧಕಾರದಲ್ಲಿ ಈ "ಹೆಚ್ಚುವರಿ" ಕ್ಷಿಪಣಿಗಳನ್ನು ತೆಗೆಯಲಾಗುತ್ತಿದೆ. ಎಂದು ಪಶ್ಚಿಮ ಜರ್ಮನಿ ಪತ್ರಿಕೆಗಳು ತಿಳಿಸಿವೆ.

ಅತ್ತ ಉತ್ತರ ಕೆನಡಾದಲ್ಲಿ ಐ.ಎನ್.ಎಫ್. ಸಂಧಿಯ ನಂತರವೂ ಜನವರಿ 17ರಂದು ಅಮೇರಿಕಾ ಕ್ರೂಯಿಸಾ ಕ್ಷಿಪಣಿಯ ಪರೀಕ್ಷಣೆ ಮುಂದುವರಿಸಿದ ಸುದ್ದಿ ಬಂದಿದೆ. ಇದು 1983ರಲ್ಲಿ ಅಮೇರಿಕಾ ಹಾಗೂ ಕೆನಡಾಗಳನಡುವಿನ ಒಪ್ಪಂದದ ಭಾಗವಾದ್ದರಿಂದ ಈ ಪರೀಕ್ಷಣೆ ನಡೆಸಬೇಕಾಯಿತ್ತೆಂದು ನೆವ ಹೂಡಲಾಗಿದ್ದರೂ ಕೆನಡಾದಲ್ಲಿ ಈ ಪರೀಕ್ಷಣೆಯ ವಿರುದ್ಧ 32 ನಗರಗಳಲ್ಲಿ ವ್ಯಾಪಕ ಪ್ರತಿಭಟನೆ ವ್ಯಕ್ತವಾಯಿತು. ಶಾಂತಿಪ್ರಚಾರಕರು ನಡೆಸಿದ ಒಂದು ಅಭಿಪ್ರಾಯ ಸಂಗ್ರಹದ ಪ್ರಕಾರ 84% ಕೆನಡಾ ವಾಸಿಗಳು ಈ ಪರೀಕ್ಷಣೆಗೆ ವಿರುದ್ಧವಾಗಿದ್ದಾರೆ.

ಅಮೇರಿಕಾದ ನೈಸರ್ಗಿಕ ಸಂಪನ್ಮೂಲ ರಕ್ಷಣಾ ಮಂಡಳಿಯೆಂಬ ಸಂಘಟನೆಯ ವಿಜ್ಞಾನಿಗಳು ಇನ್ನೊಂದು ಅಮೇರಿಕನ್ ವಂಚನೆಯನ್ನು ಬಯಲಿಗೆಳೆದಿದ್ದಾರೆ. ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಗುಪ್ತವಾಗಿ 117 ಪರಮಾಣು ಪರೀಕ್ಷೆಗಳನ್ನು ನಡೆಸಲಾಗಿದೆಯಂತೆ ಇಂತಹ ಯಾರಿಗೂ ತಿಳಿಸದಪರೀಕ್ಷಣೆಗಳ ಸಂಖ್ಯೆ ಇನ್ನೂ ಹೆಚ್ಚಿರಬಹುದೆಂದು ಈ ವಿಜ್ಞಾನಿಗಳ ಅನುಮಾನ. ○

ಮಧ್ಯ ಅಮೇರಿಕಾ ಶಾಂತಿ ಪ್ರಯತ್ನಗಳಲ್ಲಿ ಮತ್ತಷ್ಟು ಪ್ರಗತಿ

ಕೋಸ್ಟಾರಿಕಾ, ನಿಕರಾಗುವಾ, ಹೊಂಡುರಾಸ್, ಗ್ವಾಟಿಮಾಲಾ ಹಾಗೂ ಎಲ್ ಸಾಲ್ವಡೋರ್‌ನ ಅಧ್ಯಕ್ಷರುಗಳ ಮೂರನೇ ಸಭೆ ಕೋಸ್ಟಾರಿಕಾದ ಸಾನ್ ಜೋಸ್ ನಗರದಲ್ಲಿ ನಡೆಯಿತು. ಈ ಸಭೆಯ ಮೊದಲು ರೇಗನ್ ಹೊಸ ರಕ್ಷಣಾ ಸಲಹೆಗಾರ ಜನರಲ್ ಪಾವೆಲ್ ನಾಲ್ಕು ಮಧ್ಯ ಅಮೇರಿಕಾ ದೇಶಗಳ ಅಧ್ಯಕ್ಷರನ್ನು ಭೇಟಿಯಾಗಿ, ಅಮೇರಿಕಾ ನಿಕರಾಗುವಾ ಕ್ರಾಂತಿ ವಿರೋಧಿಗಳಿಗೆ ಮಿಲಿಟರಿ ನೆರವು ಖಂಡಿತಾ ಮುಂದುವರಿಸುತ್ತದೆ ಎಂದು ಬೆದರಿಸಿ ಈ ಸಭೆಯನ್ನು ನಿಷ್ಫಲಗೊಳಿಸಲು ಪ್ರಯತ್ನಿಸಿದರೂ, ಸಭೆಯಲ್ಲೇ ಬಹಳಷ್ಟು ಭಿನ್ನಾಭಿಪ್ರಾಯಗಳು, ಪರಸ್ಪರ ದೂಷಣೆಗಳು ಕೇಳಿಬಂದರೂ ಮಧ್ಯ ಅಮೇರಿಕಾದಲ್ಲಿ ಶಾಂತಿಯುತ ರಾಜಕೀಯ ಇತ್ಯರ್ಥದತ್ತ ಈ ಸಭೆ ಇನ್ನೊಂದು ದೃಢ ಹೆಜ್ಜೆಯಿಟ್ಟಿದೆಯೆಂಬುದುಗಮನಾರ್ಹ. ಇದಕ್ಕೆ ಬಹುಮುಖ್ಯ ಕಾರಣ ನಿಕರಾಗುವಾ ಸರ್ಕಾರದ ಪಾತ್ರ ಹಾಗೂ ತಮ್ಮ ಪ್ರದೇಶದಲ್ಲಿ ಶಾಂತಿ ಸ್ಥಾಪಿಸಲೇಬೇಕೆಂಬ ಮಧ್ಯ ಅಮೇರಿಕಾ ಜನತೆಯ ದೃಢ ನಿರ್ಧಾರ.

ಮಧ್ಯ ಅಮೇರಿಕಾ ಒಪ್ಪಂದ ಕುರಿತಾದ ಒಂದು ಅಂತರಾಷ್ಟ್ರೀಯ ಆಯೋಗ ಕೂಡಾ ಮಧ್ಯ ಅಮೇರಿಕಾದಲ್ಲಿ ಶಾಂತಿ ನೆಲೆಸಲು ಅಮೇರಿಕಾ ನಿಕರಾಗುವ ಕಾಂಟ್ರಾಗಳಿಗೆ ನೀಡುವ ನೆರವನ್ನು ಬೇಷರತ್ತಾಗಿ ನಿಲ್ಲಿಸಬೇಕೆಂದು ಅಭಿಪ್ರಾಯ ಪಟ್ಟಿದೆ. ಸಾನ್ ಜೋಸ್ ಸಭೆಯಲ್ಲಿ ಈ ವರದಿಯನ್ನು ಚರ್ಚಿಸಲಾಯಿತು.

ಈ ನಡುವೆ ಫೆಬ್ರವರಿ 5ರಂದು ಅಮೇರಿಕಾದ ಪ್ರತಿನಿಧಿ ಸಭೆ ನಿಕರಾಗುವಾ ಕಾಂಟ್ರಾಗಳಿಗೆ 36 ಮಿಲಿಯ ಡಾಲರ್ ಮಿಲಿಟರಿ ಹಾಗೂ ಇತರ ನೆರವು ನೀಡಬೇಕೆಂಬ ರೇಗನ್‌ರ ಕೋರಿಕೆಯನ್ನು 219-211 ಮತಗಳಿಂದ ತಿರಸ್ಕರಿಸಿದೆ. ಮರುದಿನ ಸೆನೆಟ್ ರೇಗನ್‌ರ ಕೋರಿಕೆಯನ್ನು 51-48 ಮತಗಳಿಂದ ಒಪ್ಪಿದರೂ ಪ್ರತಿನಿಧಿ ಸಭೆಯ ನಿರಾಕರಣೆಯಿಂದಾಗಿ ನಿಕ್ಕಾ ಕಾಂಟ್ರಾಗಳಿಗೆ ಅಮೇರಿಕನ್ ನೆರವು ದೋಲಾಯಮಾನ ಸ್ಥಿತಿಯಲ್ಲಿದೆ. ●

KRNW/BGS-312 MAG (2) PRB DECR 319/ · 7.8-79

ಬಂದ್ ಯಶಸ್ವಿಗೊಳಿಸಲು ಜಂಟಿ ಕರೆ

ದೇಶವನ್ನೇ ನಡುಗಿಸಿ ಬಿಟ್ಟಿವೆ. ಇದರಿಂದೇನೂ ಕಲಿಯದ ಸರ್ಕಾರವು, ಸಂಸತ್ತಿನ ಅಧಿವೇಶನಕ್ಕೆ ಪೂರ್ವಭಾವಿಯಾದ ಕ್ರಮವಾಗಿ, ಆಡಳಿತ ನಿರ್ಧರಿಸುವ ಬೆಲೆಗಳನ್ನು ಏರಿಸುವ ಹಾಗೂ ಆ ಮೂಲಕ ಬಿಕ್ಕಟ್ಟಿನ ಭಾರವನ್ನು ಜನಸಾಮಾನ್ಯರ ಹೆಗಲುಗಳಿಗೆ ವರ್ಗಾಯಿಸುವ ಹಾನಿಕಾರಕ ಕ್ರಮವನ್ನು ಸರಕಾರ ಕೈಗೊಳ್ಳುತ್ತಿದೆ. ಕೋಮು ಸೌಹಾರ್ದತೆಯು ಅಪಾಯಕ್ಕೆ ಗುರಿಯಾಗಿದೆ. ರಾಷ್ಟ್ರೀಯ ಐಕ್ಯತೆಗೆ ಸಂಬಂಧಿಸಿದ ಯಾವುದೇ ಪ್ರಶ್ನೆಯನ್ನಾದರೂ ಬಗೆಹರಿಸುವ ಕಾರ್ಯದಲ್ಲಿ ಸರಕಾರವು ವಿಫಲವಾಗಿದೆ.

ಇವೆಲ್ಲವುಗಳ ಪರಿಣಾಮವಾಗಿ ಭಾರತೀಯ ಜನತೆಯು ಎಲ್ಲಾ ವಿಭಾಗಗಳಲ್ಲೂ ಸ್ವಾಭಾವಿಕವಾಗಿ ರೋಷವನ್ನು ಉದ್ರೇಕಗೊಳಿಸಿದಂತಾಗಿದೆ. ರಾಜೀವ್ ಗಾಂಧಿ ತಮ್ಮ ಆಸೆಗಳನ್ನೂ, ನಿರೀಕ್ಷೆಗಳನ್ನೂ ಈಡೇರಿಸಿಲ್ಲವೆಂಬ ತೀರ್ಮಾನಕ್ಕೆ ಜನರು ಬಂದಿದ್ದಾರೆ. ಹೀಗಾಗಿ ಆಳುವುದಕ್ಕೆ ಜನತೆ ಅವರಿಗೆ ನೀಡಿದ್ದ ಆದೇಶವನ್ನು ಅವರು ಕಳೆದುಕೊಂಡಿದ್ದಾರೆ. ಇದನ್ನು ಜನರು ಸಾರ್ವಜನಿಕ ಮತ ಪ್ರದರ್ಶನಗಳ ಮೂಲಕವೂ ಇತರ ಪ್ರತಿಭಟನೆಗಳ ಮೂಲಕವೂ ಪ್ರಕಟಿಸಿದ್ದಾರೆ. ರಾಜೀವ್ ಗಾಂಧಿ ರಾಜೀನಾಮೆ ನೀಡಬೇಕೆಂಬ ಕೇಳಿಕೆಯನ್ನು [illegible] ಹೊರಗೂ ಎಲ್ಲ ವಿರೋಧ ಪಕ್ಷಗಳೂ ಮುಂದಿಟ್ಟಿವೆ.

ಕೇಳಿಕೆಗಳಿಗೂ ಪ್ರತಿಭಟನೆಗಳಿಗೂ ಹೆಚ್ಚು ಸ್ಪಷ್ಟವಾದ ಸ್ವರೂಪವನ್ನು ಕೊಡುವುದು ಅಗತ್ಯವೆಂದು ಈ ಸಭೆ ಪರಿಗಣಿಸುತ್ತದೆ. ಜನರ ತುರ್ತು ಬೇಡಿಕೆಗಳಿಗೆ ವಿಶೇಷವಾಗಿ ದುಡಿಯುವ ಜನರ ಕೇಳಿಕೆಗಳಿಗೆ ಒತ್ತು ಕೊಡುವುದಕ್ಕೂ, ರಾಜೀವ್ ಗಾಂಧಿ ರಾಜೀನಾಮೆ ನೀಡಬೇಕೆಂಬ ಕೇಳಿಕೆಯ ಹಿಂದೆ ಇಡೀ ದೇಶವನ್ನು ಅಣಿನೆರೆಸುವುದಕ್ಕೂ ಈ ಕೆಳಗಿನ ನಿರ್ಣಯವನ್ನು ಅಂಗೀಕರಿಸುತ್ತದೆ.

1. ಫೆಬ್ರವರಿ 23, 1988 ರಂದು ಸಂಸತ್ ಭವನದ ಮುಂದೆ ಮತ್ತು ದೇಶಾದ್ಯಂತ ಸಭೆ, ಮೆರವಣಿಗೆಗಳನ್ನು ನಡೆಸಿ 'ಭಾರತ್ ಬಚಾವ್' ದಿನವನ್ನು ಆಚರಿಸುವುದು.

2. ಮಾರ್ಚ್ 15, 1988 ರಂದು 'ಭಾರತ್ ಬಂದ್' ನಡೆಸುವುದು.

ಈ ಕರೆಗನುಗುಣವಾಗಿ ಕರ್ನಾಟಕ ರಾಜ್ಯದಲ್ಲೂ ಸಹ ಜನತಾಪಕ್ಷ, ಭಾರತ ಕಮ್ಯುನಿಸ್ಟ್ ಪಕ್ಷ ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಗಳ ಪ್ರತಿನಿಧಿಗಳು ಸೇರಿ ಈ ಎರಡೂ ದಿನಗಳನ್ನು ಯಶಸ್ವಿಗೊಳಿಸಬೇಕೆಂದು ನಿರ್ಧರಿಸಿದ್ದಾರೆ.

ರಾಜ್ಯದ ಕಾರ್ಮಿಕ ವರ್ಗ, ರೈತರು ವಿದ್ಯಾರ್ಥಿ-ಯುವಜನರೂ, ಮಹಿಳೆಯರು, ವ್ಯಾಪಾರಸ್ಥರೂ, ಕೈಗಾರಿಕೋದ್ಯಮಿಗಳು, ಎಲ್ಲಾ ಪ್ರಜಾಪ್ರಭುತ್ವವಾದಿಗಳೂ ಈ ಕರೆಗೆ ಓಗೊಟ್ಟು ಯಶಸ್ವಿಗೊಳಿಸಬೇಕೆಂದು ವಿನಂತಿಸುತ್ತೇವೆ.

ಫೆಬ್ರವರಿ 23, 1988 ರಂದು ಎಲ್ಲ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಮೆರವಣಿಗೆ, ಸಭೆಗಳನ್ನು ನಡೆಸಿರಿ; ಮಾರ್ಚ್ 15 ರಂದು ಬಂದ್ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿರಿ; "ರಾಜೀವ್‌ಗಾಂಧಿ ಸರ್ಕಾರ ರಾಜೀನಾಮೆ ಕೊಡಲಿ" ದುಡಿಯುವ ಜನರ ಕೇಳಿಕೆಗಳು ಈಡೇರಲಿ;

★ ರಾಜೀವ್‌ಗಾಂಧಿ ಸರ್ಕಾರ ರಾಜೀನಾಮೆ ಕೊಡಲಿ, ಮರು ಚುನಾವಣೆ ನಡೆಯಲಿ;

ಫೆಬ್ರವರಿ 23ರಂದು ಭಾರತ್ ಬಚಾವೋ
ಮಾರ್ಚ್ 15 ಭಾರತ ಬಂದ್

ಪಿ ರಾಮಚಂದ್ರ ರಾವ್
(ಕಾರ್ಯದರ್ಶಿ)
ಸಿ.ಪಿ.ಐ (ಎಂ)
ಕರ್ನಾಟಕ ರಾಜ್ಯ ಸಮಿತಿ

ಎಂ.ಎಸ್.ಕೃಷ್ಣನ್
(ಕಾರ್ಯದರ್ಶಿ)
ಭಾರತ ಕಮ್ಯುನಿಸ್ಟ್ ಪಕ್ಷ
ಕರ್ನಾಟಕ ರಾಜ್ಯ ಮಂಡಳಿ

ರಮೇಶ್ ಕುಮಾರ್
ಕಾರ್ಯದರ್ಶಿ
ಜನತಾ ಪಕ್ಷ
ಕರ್ನಾಟಕ ರಾಜ್ಯ

ಕರಪತ್ರದ ಮಾದರಿ

ರಾಜ್ಯದಲ್ಲಿ ಬಂದ್ ಯಶಸ್ವಿಗೊಳಿಸಲು ಜಂಟಿ ಕರೆ

ಭಾರತ ಬಂದ್ ಕಾರ್ಯಕ್ರಮವನ್ನು ಕರ್ನಾಟಕದಲ್ಲಿ ಯಶಸ್ವಿಗೊಳಿಸಲು ಸಿ.ಪಿ.ಐ. (ಎಂ), ಸಿ.ಪಿ.ಐ, ಮತ್ತು ಜನತಾ ಪಕ್ಷದ ಮುಖಂಡರ ಸಭೆ ತಾ. 13-2-88ರಂದು ಜನತಾ ಪಕ್ಷದ ಕಛೇರಿಯಲ್ಲಿ ಸೇರಿ ಸಂಯುಕ್ತ ಪ್ರಕಟಣೆ ಹೊರಡಿಸಲಾಗಿದೆ. ಜನತಾ ಪಕ್ಷದ ಪರವಾಗಿ ರಮೇಶ ಕುಮಾರ್, (ಪ್ರಧಾನ ಕಾರ್ಯದರ್ಶಿ), ಎಸ್.ಕೆ. ಕಾಂತಾ (ಕಾರ್ಮಿಕ ಮಂತ್ರಿ)ಕೃಷ್ಣ ಐಯ್ಯರ್,(ಎಂ.ಪಿ,)ಸಿ.ಪಿ.ಐ.ಯ ಎಂ.ಎಸ್. ಕೃಷ್ಣನ್,(ರಾಜ್ಯ ಕಾರ್ಯದರ್ಶಿ),ಸಿ.ಪಿ.ಐ.(ಎಂ)ನ ಸೆಕ್ರೆಟಾರಿಯೇಟ್ ಸದಸ್ಯರಾದ ಎನ್.ಕೆ.ಉಪಾಧ್ಯಾಯ, ಎಸ್. ಸೂರ್ಯನಾರಾಯಣರಾವ್ ಸಭೆಯಲ್ಲಿ ಭಾಗವಹಿಸಿದ್ದರು.

1. ಎಲ್ಲಾ ಎಡ, ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯಾತೀತ ಪಕ್ಷಗಳಾದ ಜನತಾ, ಸಿ.ಪಿ.ಐ. ಮತ್ತು ಸಿ.ಪಿ.ಐ.(ಎಂ) ಪಕ್ಷಗಳು ರಾಜೀವ್‌ಗಾಂಧಿಯವರ ರಾಜೀನಾಮೆ ಹಾಗೂ ಹೊಸದಾಗಿ ಚುನಾವಣೆಯನ್ನು ಎದುರಿಸುವಂತೆ ಒತ್ತಾಯಿಸಿ ಮತ್ತು ಸಮಾಜದ ಎಲ್ಲಾ ವರ್ಗಗಳ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ದಿನಾಂಕ 15.3.88 ರಂದು ನಡೆಸುವ "ಭಾರತ ಬಂದ್" ಕಾರ್ಯಕ್ರಮದ ಮಹತ್ವವನ್ನು ಅರಿತು ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಎಲ್ಲಾ ಪ್ರಯತ್ನ ಮಾಡಬೇಕೆಂದೂ.

2. ದಿನಾಂಕ 23-2-88ರಂದು ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ "ಭಾರತ್ ಬಚಾವ್"ನ ಮಹತ್ವದ ಬಗ್ಗೆ ಜನರಿಗೆ ತಿಳಿ ಹೇಳಲು ಮತ್ತು ಜನತೆಯ ಬೆಂಬಲ ಪಡೆಯುವ ಸಲುವಾಗಿ ಸಾರ್ವಜನಿಕ ಸಭೆ ಮತ್ತು ಬೃಹತ್ ಮೆರವಣಿಗೆ ನಡೆಸುವುದು. ಮೂರು ಪಕ್ಷಗಳ ಮುಖಂಡರು ಈ ಸಭೆಯಲ್ಲಿ ಭಾಗವಹಿಸಬೇಕೆಂದೂ.

3. ಮೆರವಣಿಗೆ ಮತ್ತು "ಭಾರತ್ ಬಂದ್" ಯಶಸ್ವಿಯಾಗುವಂತೆ ಜಿಲ್ಲಾ ಜನತಾ ಪಕ್ಷದ ಅಧ್ಯಕ್ಷರು, ಸಿ.ಪಿ.ಐ, ಮತ್ತು ಸಿ.ಪಿ.ಐ.(ಎಂ)ನ ಜಿಲ್ಲಾ ಕಾರ್ಯದರ್ಶಿಗಳು ಪರಸ್ಪರ ಸಂಪರ್ಕಿಸಿ ಹೊಂದಾಣಿಕೆಯಿಂದ ಸಿದ್ಧತೆ ನಡೆಸಬೇಕೆಂದೂ ವಿನಂತಿಸುತ್ತೇವೆ.

ರಮೇಶ್ ಕುಮಾರ್,(ಶಾಸಕರು, ಪ್ರಧಾನ ಕಾರ್ಯದರ್ಶಿ)ಕರ್ನಾಟಕ ಪ್ರದೇಶ ಜನತಾ ಪಕ್ಷ, ಎಂ.ಎಸ್. ಕೃಷ್ಣನ್, (ಶಾಸಕರು ಕಾರ್ಯದರ್ಶಿ, ಸಿ.ಪಿ.ಐ, ಕರ್ನಾಟಕ ಸ್ಟೇಟ್ ಕೌನ್ಸಿಲ್,) ಪಿ.ರಾಮಚಂದ್ರ ರಾವ್,(ಕಾರ್ಯದರ್ಶಿ, ಸಿ.ಪಿ.ಐ.(ಎಂ) ಕರ್ನಾಟಕ ಸ್ಟೇಟ್ ಕಮಿಟಿ)

ಲಕ್ಷ ರೈತರ ವಿಧಾನ ಸೌಧ ಚಲೋ

ಪೋಲೀಸ್ ಅಧಿಕಾರಿಗಳು ನಡೆಸಿದ ಲಾಠಿ ಪ್ರಹಾರವನ್ನು ರಾಜ್ಯ ಸಮಿತಿಯು ತನ್ನ ಸಭೆಯಲ್ಲಿ ಉಗ್ರವಾಗಿ ಖಂಡಿಸಿತು. ರೈತರ ಮೇಲೆ ಹಾಕಲಾದ ಸುಳ್ಳು ಖಟ್ಲೆಗಳನ್ನು ಕೂಡಲೇ ಹಿಂತೆಗೆದುಕೊಳ್ಳಲೂ ಒತ್ತಾಯ ಪಡಿಸಲಾಗಿದೆ.

ಅಖಿಲ ಭಾರತ ಕಿಸಾನ್ ಸಭಾದ ಕೌನ್ಸಿಲ್ ಸಭೆ ಹಾಗೂ ಕಾರ್ಯಕಾರಿ ಸಮಿತಿ ಸಭೆ ಏಪ್ರಿಲ್ 3ರಿಂದ 5 ರವರೆಗೆ ಬೆಂಗಳೂರಿನಲ್ಲಿ ನಡೆಯಲಿದೆ. ರಾಜ್ಯದಲ್ಲಿ ಈ ಮಾದರಿಯ ಸಭೆ ನಡೆಯುತ್ತಿರುವುದು ಇದೆ ಮೊದಲಾಗಿದ್ದು ರೈತ ಸಮುದಾಯದ ಧೀಮಂತ ಹೋರಾಟಗಾರರನ್ನು ಅಭೂತ ಪೂರ್ವ ರೀತಿಯಲ್ಲಿ ರಾಜ್ಯ ಸ್ವಾಗತಿಸಲು ನಿರ್ಧರಿಸಲಾಗಿದೆ.

ವಿವಿಧ ಸಾಮೂಹಿಕ ಸಂಘಟನೆಗಳ ಹಾಗೂ ಪ್ರಗತಿ ಪರ ಸಂಘಟನೆಗಳ ಪ್ರತಿನಿಧಿಗಳ ಸಭೆಯು 16.2.1988 ರಂದು ಬೆಂಗಳೂರಿನ ಎನ್.ಜಿ.ಓ. ಸಭಾಂಗಣದಲ್ಲಿ ನಡೆದು ಕಿಸಾನ್ ಕೌನ್ಸಿಲ್ ಸಭೆಯನ್ನು ಯಶಸ್ವಿಗೊಳಿಸಲು ಒಂದು ಸ್ವಾಗತ ಸಮಿತಿಯನ್ನು ರಚಿಸಲಾಗಿದೆ. ಸ್ವಾಗತ ಸಮಿತಿ ಅಧ್ಯಕ್ಷರಾಗಿ ರಾಜ್ಯ ಸಿ.ಐ.ಟಿ.ಯು. ಅಧ್ಯಕ್ಷರಾದ ಎಸ್. ಸೂರ್ಯನಾರಾಯಣ ರಾವ್‌ರವರನ್ನು ಸಭೆಯು ಆಯ್ಕೆ ಮಾಡಿತು. ಪ್ರಧಾನ ಕಾರ್ಯದರ್ಶಿಯಾಗಿ ಪಿ.ರಾಮಚಂದ್ರರಾವ್ ಆಯ್ಕೆಯಾಗಿರುತ್ತಾರೆ. ಉಪಾಧ್ಯಕ್ಷರುಗಳಾಗಿ ಶಾಸಕ ಆರ್. ವೆಂಕಟ್ರಾಮಯ್ಯ, ಟಿ ಎಸ್. ಮಣಿ, ಸಿ.ಐ.ಟಿ.ಯು. ರಾಜ್ಯ ಪ್ರಧಾನ ಕಾರ್ಯದರ್ಶಿ ಸಿ. ನಂಜುಂಡಪ್ಪ, ಬಿ.ಇ.ಎಫ್.ಐ. ಮುಂದಾಳು ಎಸ್. ರೇವಣ್ಣ, ಎಂ. ಎನ್.ಉಗ್ರಪ್ಪ ಆಯ್ಕೆಯಾಗಿರುತ್ತಾರೆ. ಸ್ವಾಗತಸಮಿತಿಯಲ್ಲಿ 101, ಜನ ಸದಸ್ಯರಿರುತ್ತಾರೆ. ಪ್ರಚಾರ, ಊಟ-ವಸತಿ, ವೈದ್ಯಕೀಯ, ಬಹಿರಂಗ ಸಭೆ, ವಿಚಾರ ಸಂಕಿರಣ, ಸ್ವಯಂ ಸೇವಕರು, ಸ್ವಾಗತ ಕಛೇರಿ ಮೊದಲಾದ ಉಪ ಸಮಿತಿಗಳು ಸಭೆಯ ಯಶಸ್ವಿಗೆ ದುಡಿಯಲಿವೆ.

ಸ್ವಾಗತ ಸಮಿತಿ ಸಭೆಯಲ್ಲಿ ಮಾತನಾಡಿದ ವಿವಿಧ ಸಾಮೂಹಿಕ ಸಂಘಟನೆಗಳ ಮುಖಂಡರುಗಳು ಕಿಸಾನ್ ಕೌನ್ಸಿಲ್ ಸಭೆಯನ್ನು ಅತ್ಯಂತ ಯಶಸ್ವಿಯಾಗಿ ನಡೆಸಿಕೊಡಲು ನೆರವಾಗುವ ಭರವಸೆ ನೀಡಿದರು. ಸ್ವಾಗತ ಸಮಿತಿಯ ಮುಂದಿನ ಸಭೆಯು ಮಾರ್ಚ್ 2ರಂದು ಬೆಂಗಳೂರಿನಲ್ಲಿ ನಡೆಯಲಿದೆ.

ತೋಟ ಕಾರ್ಮಿಕರ ಮಹಾ ಸಭೆ

ಕರ್ನಾಟಕ ತೋಟ ಕಾರ್ಮಿಕರ ಸಂಘದ ಮಹಾ ಸಭೆಯು ಕಾಂ.ಸಿ. ನಂಜುಂಡಪ್ಪನವರ ಅಧ್ಯಕ್ಷತೆಯಲ್ಲಿ ಜನವರಿ 25ರಂದು ಸೇರಿತು. ಪ್ರ ಕಾರ್ಯದರ್ಶಿ ಕಾಂ. ವಿ. ಸುಕುಮಾರ್ ರವರು ಚಟುವಟಿಕೆವರದಿ ಮಂಡಿಸಿದರು. ಚರ್ಚೆ ನಂತರ ಸರ್ವಾನುಮತದಿಂದ ವರದಿ ಅಂಗೀಕಾರವಾಯಿತು.

ದೇಶದ ಐಕ್ಯತೆ-ಸಮಗ್ರತೆ ರಕ್ಷಿಸುವಲ್ಲಿ ವಿಫಲವಾಗಿರುವ ಭ್ರಷ್ಟಾಚಾರಿ ರಾಜೀವ್‌ಗಾಂಧಿ ಸರ್ಕಾರ ರಾಜೀನಾಮೆಗೆ ಒತ್ತಾಯಿಸಿ ಎಡ ಮತ್ತು ಜಾತ್ಯಾತೀತ ವಿರೋಧ ಪಕ್ಷಗಳು ನೀಡಿರುವ 'ಭಾರತ್ ಬಂದ್' ಕರೆಯನ್ನು ಯಶಸ್ವಿಗೊಳಿಸಲು ಸಭೆ ನಿರ್ಣಯ ಕೈಗೊಂಡಿತು.

ಪ್ರಸಕ್ತ ಸಾಲಿಗೆ ಕಾಂ ಸಿ. ನಂಜುಂಡಪ್ಪ ಅಧ್ಯಕ್ಷರಾಗಿ ಕಾಂ.ವಿ. ಸುಕುಮಾರ್ (ಪ್ರ ಕಾರ್ಯದರ್ಶಿ) ಕೆ. ಕೃಷ್ಣ ಮತ್ತು ವಿ. ಕೃಷ್ಣಮೂರ್ತಿ (ಉಪಾಧ್ಯಕ್ಷರು) ಕಾಂ. ದೂಜ ಮತ್ತು ಕೆ.ಎಂ. ಅಬ್ದುಲ್‌ಜಬಾರ್ (ಉಪಕಾರ್ಯದರ್ಶಿಗಳು)ಪಾಲ್‌ಯೂಜನ್ ಡಿಸೋಜಾ ಖಜಾಂಚಿಯಾಗಿಯೂ 15 ಮಂದಿ ಕಾರ್ಯಕಾರಿ ಸಮಿತಿ ಸದಸ್ಯರನ್ನು ಮಹಾ ಸಭೆ ಚುನಾಯಿಸಿತು.

ದಾವಣಗೆರೆ ಹತ್ತಿ ಗಿರಣಿ ಕಾರ್ಮಿಕ ಹೋರಾಟಕ್ಕೆ ಬೆಂಬಲ

ದಾವಣಗೆರೆಯ ಶ್ರೀ ಸಿದ್ಧೇಶ್ವರ, ಶ್ರೀ ಗಣೇಶ್ ಮತ್ತು ಶ್ರೀ ಚಿಗಟೇರಿ ಹತ್ತಿಗಿರಣಿ ಕಾರ್ಖಾನೆಗಳು ಕಳೆದ 8 ತಿಂಗಳಿಂದ ಮುಚ್ಚಿದ್ದು 3 ಸಾವಿರ ಕಾರ್ಮಿಕರು ಬೀದಿ ಪಾಲಾಗಿದ್ದಾರೆ. [illegible] ಸಿ.ಐ.ಟಿ.ಯು ಗೆ ಸೇರಿದ 7 ಕಾರ್ಮಿಕರ ಸಂಘಗಳು ಫೆಬ್ರವರಿ 9ರಂದು ಹರಿಹರ ತಾಲೋಕು ತಹಸೀಲ್ದಾರ್ ಕಛೇರಿ ಮುಂದೆ ಸಾಮೂಹಿಕ ಧರಣಿ ಸತ್ಯಾಗ್ರಹ ನಡೆಸಿ ದಾವಣಗೆರೆ ಗಿರಣಿ ಕಾರ್ಮಿಕರ ಬೇಡಿಕೆಗಳನ್ನು ಬಗೆಹರಿಸಲು ಒತ್ತಾಯಿಸಿ ಮನವಿ ಅರ್ಪಿಸಲಾಯಿತು. ನಂತರ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ರಾಜ್ಯ ಸಿ.ಐ.ಟಿ.ಯು. ಕಾರ್ಯದರ್ಶಿ ಕಾಂ ವಿ.ಜೆ.ಕೆ. ನಾಯರ್, ನಿತ್ಯಾನಂದಸ್ವಾಮಿ, ಆರ್. ಬಿ. ಅಂಗಡಿ, ಧ್ರುವಕುಮಾರ್, ಆನಂದರಾವ್, ಮತ್ತು ಕೆ. ಬಸವರಾಜಪ್ಪನವರು ಮಾತನಾಡಿದರು.

(1 ನೇ ಪುಟದಿಂದ)

ಪ್ರಸಂಗ ಬರಬಹುದೆಂದೂ ಅವರು ಎಚ್ಚರಿಕೆ ನೀಡಿದ್ದಾರೆ. ಕರ್ನಾಟಕದ ಜನತಾ ಸರ್ಕಾರ ರಾಜೀವ್‌ಗಾಂಧಿಯವರಿಗೆ, ಇಂಥ ಮಸೂದೆಯನ್ನು ಲೋಕ ಸಭೆಯಲ್ಲಿ ತಂದು ಲೋಕಸಭಾ ಸದಸ್ಯರ ಬಾಯಿ ಮುಚ್ಚಿಸಲು ದಾರಿ ಮಾಡಿಕೊಡುತ್ತಿದೆಂದು ತಮ್ಮ ಸರ್ಕಾರವನ್ನು ತಾವೇ ಮೂದಲಿಸಿದ್ದಾರೆ.

ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಬೆಳೆಯಬೇಕು, ರಾಜೀವಗಾಂಧಿಯ ಜನ ವಿರೋಧಿ ಸರ್ಕಾರ ರಾಜಿನಾಮೆ ಕೊಡಬೇಕೆಂದು ನಾವೆಲ್ಲ ಪ್ರಯತ್ನ ನಡೆಸುತ್ತಿರುವಾಗ, ಅದರಲ್ಲಿ ಜನತಾ ಪಕ್ಷದ ಪ್ರಮುಖ ಪಾತ್ರ ಇರುವಾಗ, ಆ ಪಕ್ಷದ ಸರಕಾರ ಇಂಥ ಮಸೂದೆಯ ಮೂಲಕ ಎಡ ಮತ್ತು ಪ್ರಜಾಪ್ರಭುತ್ವ ರಂಗದ ಚಳುವಳಿಗೆ ಧಕ್ಕೆ ಉಂಟು ಮಾಡುತ್ತಿದೆ. ಆದ್ದರಿಂದ ಅಂಥ ಕ್ರಮವನ್ನು ಜನತಾ ಪಕ್ಷ ಕೈ ಬಿಡುವುದು ಅತ್ಯಗತ್ಯ.

Printed & Published by P. Ramachandra Rao on behalf of the Communist Party of India [Marxist] Karnataka State Committee
K. V. Temple Street, Sultanpet, Bangalore-560053 Editorial and Managerial Office : L-56, K. V. Temple Street,
Sultanpet B-53 Phone · 75331 UMA Printers B-53 Editor : P. Ramachandra Rao Managing Editor : N. K. Upadhyaya